





E-Bengaluru Beragu

MAG (2) PRB/CR/36/24-25
T/KN2024/2076


# ಈ-ಬೆಂಗಳೂರು ಬೆರಗು


ಸಂಪುಟ: 3 Vol: 3 ಸಂಚಿಕೆ: 01 Issue: 01 ಮೇ 15 - 31 ಪುಟಗಳು: 12 Pages: 12 ಬೆಲೆ: 15.00 ರೂ.




## ಡಿ.ಕೆ. ಶಿವಕುಮಾರ್ ಪಟ್ಟಾಭಿಷೇಕಕ್ಕೆ ಭರ್ಜರಿ ಸಿದ್ಧತೆ

## ಜನತಾ ಪರಿವಾರದಿಂದ ಕಾಂಗ್ರೆಸ್ ಶಕ್ತಿಕೇಂದ್ರದವರೆಗೆ ಸಿದ್ದರಾಮಯ್ಯ ರಾಜಕೀಯ ಪಯಣ






## ಐಪಿಎಲ್‌ನಲ್ಲಿ 600 ರನ್ ಗಳಿಸಿ ಇತಿಹಾಸ ನಿರ್ಮಿಸಿದ ಸೂರ್ಯವಂಶಿ ವೈಭವ್

## ಸತತ ಎರಡು ಬಾರಿ ಬೆಂಗಳೂರು ಆರ್‌ಸಿಬಿ ತಂಡಕ್ಕೆ ಐಪಿಎಲ್ ಚಾಂಪಿಯನ್ ಪಟ್ಟ



ನೇರ, ನಿರ್ಭೀತಿ, ನಿಷ್ಪಕ್ಷಪಾತ ಮತ್ತು ನಿಮ್ಮ ಆಯ್ಕೆಯ ಸುದ್ದಿಗಳಿಗಾಗಿ....



ಸಂಪಾದಕರ ಪುಟ



# ಗ್ರಾಮಾಂತರ ಪಂಚಾಯತ್ ಇ–ಖಾತೆಯು ಇ–ಸ್ವತ್ತು 2.0ರಲ್ಲಿ 1.40 ಲಕ್ಷ ಅರ್ಜಿ ಅನುಮೋದನೆ ಮತ್ತು ವಿತರಣೆ




**ಹೊ**ಸ ಬಡಾವಣೆಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ ನೀಡಲಾಗಿದೆ. ಈವರೆಗೆ 2,238 ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಕೆಯಾಗಿದ್ದು, ಅವುಗಳಲ್ಲಿ 998 ಹೊಸ ಬಡಾವಣೆಗಳಿಗೆ ಗ್ರಾಮ ಪಂಚಾಯಿತಿ ಹಂತದಲ್ಲಿ ಅನುಮೋದನೆ. ನಮೂನೆ–11 ಬಿ ಖಾತೆಗಳನ್ನು ನಮೂನೆ–11ಎ ಗಳಾಗಿ ಪರಿವರ್ತನೆ ಮಾಡಿಕೊಳ್ಳಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ. ಹೊಸ ಬಹುಮಹಡಿ ಕಟ್ಟಡಗಳಿಗೆ (ಅಪಾರ್ಟ್‌ಮೆಂಟ್) ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ. ಇ–ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಗುಂಟೆ ಮತ್ತು ಸೆಂಟ್ಸ್‌ನಲ್ಲಿರುವ ವಿಸ್ತೀರ್ಣವನ್ನು ಚ.ಮೀ ನಲ್ಲಿ ಪರಿವರ್ತಿಸಿ, ಅರ್ಜಿಗಳನ್ನು ಸಲ್ಲಿಸಲು ಅವಕಾಶ. ಇ–ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್ಫೇಸ್ ಮೂಲಕ ಋಣಭಾರ ಪ್ರಮಾಣಪತ್ರ ಸಲ್ಲಿಸಲು ಉಂಟಾಗುತ್ತಿದ್ದ ಸಮಸ್ಯೆಗಳನ್ನು ಪರಿಷ್ಕರಿಸಿ ತಂತ್ರಾಂಶದಲ್ಲಿ ಬದಲಾವಣೆ ಮಾಡಿ ಆದಷ್ಟು ಬಗೆಹರಿಸಲಾಗಿದೆ.


ಇ–ಸ್ವತ್ತು 2.0 ತಂತ್ರಾಂಶದಡಿ ಸ್ವೀಕರಿಸುತ್ತಿರುವ ಅರ್ಜಿಗಳ ವಿಲೇವಾರಿ ಪ್ರಕ್ರಿಯೆ ತೀವ್ರಗೊಳಿಸಿದ್ದು, ಈವರೆಗೆ ಒಟ್ಟು 1,40,719 ಅರ್ಜಿಗಳನ್ನು ಅನುಮೋದಿಸಿ, ವಿಲೇವಾರಿ ಮಾಡಲಾಗಿದೆ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಹೊಸ ನಮೂನೆ 11–ಬಿ ಅಡಿ ಈವರೆಗೆ 82,640 ಅರ್ಜಿಗಳು ಸ್ವೀಕೃತವಾಗಿದ್ದು, ವಿವಿಧ ಹಂತಗಳಲ್ಲಿ ಈ ಅರ್ಜಿಗಳು ಅನುಮೋದನೆಗೆ ಬಾಕಿ ಉಳಿದಿವೆ. ಈ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಇ–ಸ್ವತ್ತು 2.0 ತಂತ್ರಾಂಶದಡಿ ಸಾರ್ವಜನಿಕರಿಂದ ಇದುವರೆಗೆ ಒಟ್ಟು 1,52,863 ಅರ್ಜಿಗಳು ಸ್ವೀಕೃತವಾಗಿವೆ. ಇವುಗಳಲ್ಲಿ 7,896 ಅರ್ಜಿಗಳು ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಲಾಗಿನ್‌ನಲ್ಲಿ, 3.182 ಅರ್ಜಿಗಳು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ನಲ್ಲಿ, 4,036 ಅರ್ಜಿಗಳು ಗ್ರಾಮ ಪಂಚಾಯಿತಿ ಅಧ್ಯಕ್ಷರು/ಆಡಳಿತಾಧಿಕಾರಿ ಲಾಗಿನ್‌ನಲ್ಲಿ ಹಾಗೂ 1,947 ಅರ್ಜಿಗಳು ತಾ.ಪಂ. ಇಒ ಲಾಗಿನ್‌ಲ್ಲಿ ಅನುಮೋದನೆಗಾಗಿ ಬಾಕಿ ಇವೆ ಎಂದಿದ್ದಾರೆ.

ಅಲ್ಲದೇ, 950 ಅರ್ಜಿಗಳು ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆಗೊಂಡು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ನಲ್ಲಿವೆ. ಈ ರೀತಿ, ವಿವಿಧ ಹಂತಗಳಲ್ಲಿ ಒಟ್ಟು 18,011 ಅರ್ಜಿಗಳು ಅನುಮೋದನೆಗಾಗಿ ಬಾಕಿ ಇವೆ ಎಂದು ವಿವರಿಸಿದ್ದಾರೆ.

ಇ–ಸ್ವತ್ತು 2.0 ತಂತ್ರಾಂಶದ ಸಿಟಿಜನ್ ಇಂಟರ್ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವಲ್ಲಿ ಮತ್ತು ಬಳಕೆದಾರರು ಅರ್ಜಿಗಳನ್ನು ಅನುಮೋದನೆ ಮಾಡುವ ಸಂದರ್ಭಗಳಲ್ಲಿ ಎದುರಾಗುತ್ತಿದ್ದ ತಾಂತ್ರಿಕ ಸಮಸ್ಯೆಗಳನ್ನು ಆದಷ್ಟು ಪರಿಹರಿಸಲಾಗಿದೆ ಎಂದು ಪಂಚಾಯಿತ್ ರಾಜ್ ಸಚಿವರು ಹೇಳಿದ್ದಾರೆ. ಈ ಕ್ರಮದಿಂದ ಇ–ಸ್ವತ್ತು ಖಾತೆ ಪಡೆಯಲು ಎಷ್ಟು ಜನರಿಗೆ ಉಪಯೋಗವಾಗಲಿದೆ ಎಂದು ಕಾದು ನೋಡಬೇಕಾಗಿದೆ.



ಈ ಬೆಂಗಳೂರು ಬೆರಗು ಪತ್ರಿಕೆ ವಿಭಾಗಕ್ಕೆ ಲೇಖನಗಳು, ವ್ಯಕ್ತಿಪರಿಚಯ, ಪುಸ್ತಕ ವಿಮರ್ಶೆ, ಸಿನೆಮಾ ವಿಮರ್ಶೆ, ನಾಟಕ ವಿಮರ್ಶೆ, ಕವನ, ಸಾಮಾಜಿಕ ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು–ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಚಿಕ್ಕ ಮತ್ತು ಚೊಕ್ಕವಾಗಿ 1000 ಪದಗಳು ಮೀರದಂತೆ ಕಳುಹಿಸಲು ಈ ಕೆಳಗಿನ ಇ–ಮೇಲ್ ವಿಳಾಸವನ್ನು ಬಳಸಿ ಸಲ್ಲಿಸಬಹುದಾಗಿರುತ್ತದೆ.

**ಕಥೆ–ಕವನ ಕಳುಹಿಸುವ ಮುನ್ನ**

* ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು.

* ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು.

* ಕಥೆ–ಕವನಗಳು ಯೂನಿಕೋಡ್‌ನಲ್ಲಿ ಇರಬೇಕು.

* ಕಥೆ/ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು.

* ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು.

* ಸಂಪಾದಕರ ತೀರ್ಮಾನವೇ ಅಂತಿಮ.

ಇ–ಮೇಲ್ ವಿಳಾಸ : ebbvijay@gmail.com

**ಇ–ಬೆಂಗಳೂರು ಬೆರಗು ವಿಳಾಸ:** ಇ–ಬೆಂಗಳೂರು ಬೆರಗು, ಕೇರಾಫ್ ಚನ್ನಮ್ಮ ಅಸೋಸಿಯೇಟ್ಸ್, ನಂ.1303, ನೆಲಮಹಡಿ, 4ನೇ ಕ್ರಾಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಕತ್ರಿಗುಪ್ಪೆ/ವಿದ್ಯಾಪೀಠ ಮುಖ್ಯರಸ್ತೆ, ಬೆಂಗಳೂರು–560 050.

EBB Office # 1303, Ground Floor, 4th Cross, Ashok Nagar, BSK 1st Stage, Kathriguppe/Vidyapeeta Main Road, Bengaluru-560 050.

# ಜನತಾ ಪರಿವಾರದಿಂದ ಕಾಂಗ್ರೆಸ್ ಶಕ್ತಿಕೇಂದ್ರದವರೆಗೆ ಸಿದ್ದರಾಮಯ್ಯ ರಾಜಕೀಯ ಪಯಣ



**ಕ**ರ್ನಾಟಕ ರಾಜಕೀಯದಲ್ಲಿ ಸಾಮಾನ್ಯ ರೈತ ಕುಟುಂಬದಿಂದ ಹೊರಹೊಮ್ಮಿ, ಐದು ದಶಕಗಳ ಕಾಲ ಅಧಿಕಾರದ ಕೇಂದ್ರಬಿಂದುವಾಗಿರುವ ನಾಯಕರು ವಿರಳ. ಅಂತಹ ಅಪರೂಪದ ನಾಯಕರಲ್ಲಿ ಪ್ರಮುಖ ಹೆಸರು ಸಿದ್ದರಾಮಯ್ಯ. ಗ್ರಾಮೀಣ ಹಿನ್ನೆಲೆಯಿಂದ ಆರಂಭವಾದ ಅವರ ರಾಜಕೀಯ ಪಯಣ, ಸಮಾಜವಾದಿ ಚಳವಳಿಯಿಂದ ಕಾಂಗ್ರೆಸ್‌ನ ಅತಿ ಪ್ರಭಾವಿ ನಾಯಕರವರೆಗೆ ಬೆಳೆಯಿತು.

ಮೈಸೂರು ಜಿಲ್ಲೆಯ ಸಿದ್ದರಾಮನಹುಂಡಿಯಲ್ಲಿ 1948 ರಲ್ಲಿ ಜನಿಸಿದ ಸಿದ್ದರಾಮಯ್ಯ, ವಿದ್ಯಾರ್ಥಿ ಜೀವನದಲ್ಲಿಯೇ ಸಾಮಾಜಿಕ ಜನಜೀವನ ಅಭಿವೃದ್ಧಿ ವಿಷಯದಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದರು. ವಕೀಲರಾಗಿ ವೃತ್ತಿ ಆರಂಭಿಸಿದ ಅವರು, ಜನಸಾಮಾನ್ಯರ ಸಮಸ್ಯೆಗಳತ್ತ ಒಲವು ಹೊಂದಿದ್ದರಿಂದ ರಾಜಕೀಯದತ್ತ ಆಕರ್ಷಿತರಾದರು. 1983ರಲ್ಲಿ ಭಾರತ ಲೋಕದಳ ಅಭ್ಯರ್ಥಿಯಾಗಿ ಚಾಮುಂಡೇಶ್ವರಿ ಕ್ಷೇತ್ರದಿಂದ ಗೆದ್ದು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಈ ಗೆಲುವು ಅವರ ರಾಜಕೀಯ ಬದುಕಿನ ಮಹತ್ವದ ತಿರುವಾಯಿತು.

ಜನತಾ ಪರಿವಾರದ ರಾಜಕಾರಣದಲ್ಲಿ ಸಿದ್ದರಾಮಯ್ಯ ಶೀಘ್ರವೇ ಪ್ರಭಾವಿ ನಾಯಕರಾಗಿ ಹೊರಹೊಮ್ಮಿದರು. ರಾಮಕೃಷ್ಣ ಹೆಗಡೆ ಸರ್ಕಾರದಲ್ಲಿ ಪಶುಸಂಗೋಪನೆ, ಸಾರಿಗೆ ಸೇರಿದಂತೆ ಹಲವು ಖಾತೆಗಳನ್ನು ನಿರ್ವಹಿಸಿದರು. ನಂತರ 1994 ರಲ್ಲಿ ಜನತಾದಳ ಸರ್ಕಾರದಲ್ಲಿ ಹಣಕಾಸು ಸಚಿವರಾಗಿ ಅನೇಕ ಬಜೆಟ್ ಮಂಡಿಸಿ ಆಡಳಿತಪರ ಸಾಮರ್ಥ್ಯ ತೋರಿದರು. ಗ್ರಾಮೀಣ ಜನತೆ ಮತ್ತು ಹಿಂದುಳಿದ ವರ್ಗಗಳ ಪರ ಧ್ವನಿ ಎತ್ತಿದ ಅವರು, "ಅಹಿಂದ" ರಾಜಕೀಯ ಸಮೀಕರಣದ ಮೂಲಕ ವಿಶಿಷ್ಟ ಗುರುತನ್ನು ನಿರ್ಮಿಸಿಕೊಂಡರು.

ಜನತಾದಳದಲ್ಲಿ ದೀರ್ಘಕಾಲ ಸಕ್ರಿಯರಾಗಿದ್ದ ಸಿದ್ದರಾಮಯ್ಯ, ನಂತರ ಎಚ್.ಡಿ. ದೇವೇಗೌಡ ಹಾಗೂ ಜೆಡಿಎಸ್ ನಾಯಕತ್ವದೊಂದಿಗೆ ಭಿನ್ನಾಭಿಪ್ರಾಯಕ್ಕೆ ಒಳಗಾದರು. ವಿಶೇಷವಾಗಿ ಕುಟುಂಬ ರಾಜಕಾರಣ ಮತ್ತು ನಾಯಕತ್ವದ ಪ್ರಶ್ನೆಯಲ್ಲಿ ಉಂಟಾದ ಸಂಘರ್ಷ ಅವರ ರಾಜಕೀಯ ದಿಕ್ಕೇ ಬದಲಿಸಿತು. 2006ರಲ್ಲಿ ಕಾಂಗ್ರೆಸ್ ಸೇರ್ಪಡೆಯಾದ ಅವರು, ಕೆಲವೇ ವರ್ಷಗಳಲ್ಲಿ ಪಕ್ಷದ ಪ್ರಮುಖ ಮುಖವಾಗಿ ಹೊರಹೊಮ್ಮಿದರು. ಕಾಂಗ್ರೆಸ್ ವಿರೋಧಿ ರಾಜಕಾರಣದಿಂದ ಕಾಂಗ್ರೆಸ್‌ನ ಪ್ರಮುಖ ನಾಯಕನಾಗುವ ತನಕದ ಅವರ ಬದಲಾವಣೆ ಕರ್ನಾಟಕ ರಾಜಕೀಯದ ಮಹತ್ವದ ಅಧ್ಯಾಯವೆಂದು ಪರಿಗಣಿಸಲಾಗಿದೆ.

2010 ರಲ್ಲಿ ಬಳ್ಳಾರಿ ಪಾದಯಾತ್ರೆ ಮತ್ತು 2012 ರಲ್ಲಿ ಕೃಷ್ಣಾನದಿ ಚಳುವಳಿ ಮೂಲಕ ಜನಪರ ಕಾಳಜಿಯಿಂದ 2013ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನಿಂದ ಸಿದ್ದರಾಮಯ್ಯ ಮುಖ್ಯಮಂತ್ರಿ ಪಟ್ಟಕ್ಕೇರಿದರು. ಅನ್ನಭಾಗ್ಯ, ಕ್ಷೀರಭಾಗ್ಯ, ಇಂದಿರಾ ಕ್ಯಾಂಟೀನ್ ಮುಂತಾದ ಜನಪರ ಯೋಜನೆಗಳ ಮೂಲಕ ಅವರು ಕಲ್ಯಾಣರಾಜಕಾರಣಕ್ಕೆ ಹೊಸ ರೂಪ ನೀಡಿದರು. ನಾಲ್ಕು ದಶಕಗಳ ನಂತರ ಐದು ವರ್ಷಗಳ ಪೂರ್ಣಾವಧಿ ಮುಗಿಸಿದ ಎರಡನೇ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಯೂ ಅವರಿಗೆ ಸಿಕ್ಕಿತು. ಅವರ ಆಡಳಿತದಲ್ಲಿ ಹಿಂದುಳಿದ ವರ್ಗಗಳು, ರೈತರು ಮತ್ತು ಬಡಜನರ ಪರ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಲಾಯಿತು.

ಆದರೆ 2018ರಲ್ಲಿ ಕಾಂಗ್ರೆಸ್ ಬಹುಮತ ಕಳೆದುಕೊಂಡರೂ, ಸಿದ್ದರಾಮಯ್ಯ ರಾಜ್ಯ ರಾಜಕಾರಣದಲ್ಲಿ ತಮ್ಮ ಪ್ರಭಾವ ಕಳೆದುಕೊಳ್ಳಲಿಲ್ಲ. ವಿವಿಧ ಚಳುವಳಿಗಳ ಮತ್ತು ಜನಾಂದೋಲನ ಮೂಲಕ 2023ರಲ್ಲಿ ಕಾಂಗ್ರೆಸ್ ಭರ್ಜರಿ ಜಯ ಸಾಧಿಸಿದ ನಂತರ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾದರು. ಗೃಹಲಕ್ಷ್ಮಿ, ಶಕ್ತಿ, ಅನ್ನಭಾಗ್ಯ ವಿಸ್ತರಣೆ ಸೇರಿದಂತೆ ಗ್ಯಾರಂಟಿ ಯೋಜನೆಗಳ ಮೂಲಕ ಸರ್ಕಾರ ಜನಮನ ಸೆಳೆಯಲು ಪ್ರಯತ್ನಿಸಿತು. ಇದೇ ಅವಧಿಯಲ್ಲಿ ಅವರು ಕರ್ನಾಟಕದ ಅತಿ ಹೆಚ್ಚು ಅವಧಿ ಮುಖ್ಯಮಂತ್ರಿಯಾಗಿರುವ ದಾಖಲೆ ನಿರ್ಮಿಸಿದರು.

ಇಷ್ಟೆಲ್ಲಾ ಪರ ಮತ್ತು ವಿರೋಧಗಳ ನಡುವೆ ಗ್ಯಾರಂಟಿ ಯೋಜನೆಗಳ ಆರ್ಥಿಕ ಭಾರವನ್ನು ಸರಿದೂತಿಸಲು ಹತ್ತು ಲಕ್ಷ ಕೋಟಿ ಸಾಲವನ್ನು ಮಾಡಿ ಸರ್ಕಾರ ತೂಗಿಸುವ ಸಮಯದಲ್ಲಿ ಹೈಕಮಾಂಡ್ ಒತ್ತಡಕ್ಕೆ ಮಣಿದು 2026ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಅವರ ದೀರ್ಘ ರಾಜಕೀಯ ಅಧ್ಯಾಯ ಮತ್ತೊಂದು ತಿರುವು ಕಂಡಿತು. ಆದರೆ "ರಾಜಕೀಯದಿಂದ ದೂರವಾಗುವುದಿಲ್ಲ" ಎಂಬ ಹೇಳಿಕೆಯಿಂದ ಅವರು ಇನ್ನೂ ಕರ್ನಾಟಕ ರಾಜಕಾರಣದಲ್ಲಿ ಪ್ರಭಾವಿ ಶಕ್ತಿಯಾಗಿಯೇ ಉಳಿಯಲಿದ್ದಾರೆ ಎಂಬ ಸಂದೇಶ ನೀಡಿದರು.

ಸಿದ್ದರಾಮಯ್ಯ ರಾಜಕೀಯ ಪಯಣವನ್ನು ಕೇವಲ ಅಧಿಕಾರದ ಕಥೆಯಾಗಿ ನೋಡಲು ಸಾಧ್ಯವಿಲ್ಲ. ಅದು ಹಿಂದುಳಿದ ವರ್ಗಗಳ ಪ್ರತಿನಿಧಿತ್ವ, ಸಾಮಾಜಿಕ ನ್ಯಾಯ ಮತ್ತು ಜನಪರ ರಾಜಕಾರಣದ ಅಧ್ಯಯನವೂ ಹೌದು. ವಿರೋಧಗಳ ನಡುವೆಯೂ ಜನಾಧಾರ ಉಳಿಸಿಕೊಂಡು, ಗ್ರಾಮೀಣ ಕರ್ನಾಟಕದ ರಾಜಕೀಯ ಭಾಷೆಯನ್ನು ರಾಜ್ಯದ ಆಡಳಿತ ಕೇಂದ್ರಕ್ಕೆ ತಂದು ನಿಲ್ಲಿಸಿದ ನಾಯಕನಾಗಿ ಸಿದ್ದರಾಮಯ್ಯ ತಮ್ಮದೇ ಆದ ಹೆಗ್ಗುರುತಾಗಿ ಛಾಪನಮ್ಮು ಮೂಡಿಸಿದ್ದಾರೆ.

# ಡಿ.ಕೆ. ಶಿವಕುಮಾರ್ ಪಟ್ಟಾಭಿಷೇಕಕ್ಕೆ ಭರ್ಜರಿ ಸಿದ್ಧತೆ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆಗಳ ನಡುವೆ, ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರ ಪ್ರಮಾಣವಚನ ಸಮಾರಂಭಕ್ಕೆ ಭರ್ಜರಿ ಸಿದ್ಧತೆಗಳು ಆರಂಭ ಗೊಂಡಿವೆ. ಕಾಂಗ್ರೆಸ್ ಹೈ ಕಮಾಂಡ್‌ನಿಂದ ಗ್ರೀನ್ ಸಿಗ್ನಲ್ ದೊರೆತಿರುವ ಹಿನ್ನೆಲೆ, ಎರಡು ದಿನಗಳಲ್ಲಿ ನಡೆಯಲಿರುವ ಪದಗ್ರಹಣ ಕಾರ್ಯಕ್ರಮಕ್ಕಾಗಿ ಸರ್ಕಾರ ಹಾಗೂ ಪಕ್ಷದ ವಲಯದಲ್ಲಿ ಚಟುವಟಿಕೆಗಳು ಗರಿಗೆದರಿವೆ.



ನಗರದ ಕಂಠೀರವ ಕ್ರೀಡಾಂಗಣ ಅಥವಾ ವಿಧಾನಸೌಧದ ಮುಂದೆ ಬೃಹತ್ ವೇದಿಕೆ ಸಿದ್ಧಪಡಿಸಲು ಅಧಿಕಾರಿಗಳು ಸ್ಥಳ ವೀಕ್ಷಣೆ ನಡೆಸಿದರು.


ಈಗಾಗಲೇ ಸರ್ಕಾರದ ಹಿರಿಯ ಅಧಿಕಾರಿಗಳು ಹಾಗೂ ಪೊಲೀಸ್ ಇಲಾಖೆ ಉನ್ನತಾಧಿಕಾರಿಗಳು ಕ್ರೀಡಾಂಗಣಕ್ಕೆ ಹಾಗೂ ವಿಧಾನಸೌಧಕ್ಕೆ ಭೇಟಿ ನೀಡಿ ಭದ್ರತೆ, ಜನಸಂದಣಿ ನಿಯಂತ್ರಣ ಹಾಗೂ ಕಾರ್ಯಕ್ರಮ ವ್ಯವಸ್ಥೆಗಳ ಕುರಿತು ಪರಿಶೀಲನೆ ನಡೆಸಿದ್ದಾರೆ.

ಪ್ರಮಾಣವಚನ ಸಮಾರಂಭದಲ್ಲಿ ಸುಮಾರು 50 ಸಾವಿರಕ್ಕೂ ಹೆಚ್ಚು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಾಗೂ ಡಿ.ಕೆ. ಶಿವಕುಮಾರ್ ಅಭಿಮಾನಿಗಳು ಭಾಗವಹಿಸುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಈ ಹಿನ್ನೆಲೆ ಕ್ರೀಡಾಂಗಣ ಅಥವಾ ವಿಧಾನಸೌಧ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲು ಅಧಿಕಾರಿಗಳು ಚರ್ಚೆ ನಡೆಸಿದ್ದಾರೆ.

ಇನ್ನೊಂದೆಡೆ, ಕಾರ್ಯಕ್ರಮದ ದಿನ ಟ್ರಾಫಿಕ್ ದಟ್ಟಣೆ ಉಂಟಾಗದಂತೆ ನಗರ ಸಂಚಾರ ವ್ಯವಸ್ಥೆಯಲ್ಲಿ ಬದಲಾವಣೆ ಮಾಡುವ ಕುರಿತೂ ಪೊಲೀಸ್ ಇಲಾಖೆ ಸಿದ್ಧತೆ ನಡೆಸಿದೆ. ಪ್ರಮುಖ ರಸ್ತೆಗಳಲ್ಲಿ ಬದಲಿ ಮಾರ್ಗ ವ್ಯವಸ್ಥೆ ಜಾರಿಗೊಳಿಸುವ ಬಗ್ಗೆ ಚಿಂತನೆ ನಡೆಯುತ್ತಿದೆ.

ಕಾರ್ಯಕ್ರಮಕ್ಕೆ ಆಗಮಿಸುವ ಸಾವಿರಾರು ಕಾರ್ಯಕರ್ತರ ವಾಹನಗಳ ನಿಲುಗಡೆಗಾಗಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಕುರಿತೂ ಅಧಿಕಾರಿಗಳು ಸಮಾಲೋಚನೆ ನಡೆಸಿದ್ದಾರೆ. ಸಮಾರಂಭವನ್ನು ಐತಿಹಾಸಿಕವಾಗಿ ನಡೆಸಲು ಕಾಂಗ್ರೆಸ್ ನಾಯಕರು ಸಕಲ ಸಿದ್ಧತೆಯಲ್ಲಿ ತೊಡಗಿದ್ದಾರೆ.

# ತಮಿಳುನಾಡಲ್ಲಿ ಸಿನಿಮಾ ನಟ ವಿಜಯ್‌ರವರ ಟಿವಿಕೆ 'ವಿಜಯ' ದುಂದುಭಿ



***ಆಡಳಿತಾರೂಢ ಡಿಎಂಕೆಯ ಹಿರಿಯ ನಾಯಕ, ಸಹಕಾರ ಸಚಿವ ಕೆ.ಆರ್. ಪೆರಿಯ ಕರುಪ್ಪನ್ ಅವರು ತಿರುಪತ್ತೂರು ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಒಂದು ಮತದಿಂದ ಸೋತಿದ್ದಾರೆ. ಟಿವಿಕೆಯ ಸೀನಿವಾಸ ಸೇತುಪತಿ ಆರ್. ಅವರು 83,375 ಮತ ಪಡೆಯುವ ಮೂಲಕ ಗೆಲುವು ಸಾಧಿಸಿದರೆ, ಪೆರಿಯಕರುಪ್ಪನ್ ಅವರು 83,374 ಮತ ಗಳಿಸಿದ್ದಾರೆ. ಅಂತಿಮ ಸುತ್ತಿನ ಮತ ಎಣಿಕೆಯಲ್ಲಿ ಕರುಪ್ಪನ್ ಅವರು 30 ಮತಗಳ ಮುನ್ನಡೆ ಸಾಧಿಸಿದ್ದರು. ಅಂತಿಮ ಅಂಕಿ ಅಂಶಗಳನ್ನು ಪರಿಗಣಿಸಿದಾಗ ಟಿವಿಕೆ ಅಭ್ಯರ್ಥಿಯ ಪರ ಫಲಿತಾಂಶ ಹೊರಹೊಮ್ಮಿತು. ಬಿಜೆಪಿಯ ಕೆ.ಸಿ. ತಿರುಮಾರನ್ ಅವರು 29,054 ಮತ ಪಡೆದು ಮೂರನೇ ಸ್ಥಾನ ಪಡೆದಿದ್ದಾರೆ.***

**ರಾ**ಜಕಾರಣ ಮಾಡುವುದು ಸಿನಿಮಾ ಮಾಡಿದಷ್ಟು ಸುಲಭವಲ್ಲ' ಹೀಗೆಂದು ಹೇಳಿದ್ದವರು ಕಮಲಹಾಸನ್. ಜಯಲಲಿತಾ ಅವರ ಸಾವಿನ ನಂತರದ ದಿನಗಳಲ್ಲಿ ರಾಜಕೀಯಕ್ಕೆ ಬಂದು, ಹೊಸ ಪಕ್ಷ (ಮಕ್ಕಳ ನೀಧಿ ಮಯ್ಯಂ) ಸ್ಥಾಪಿಸಿ, ಒಂದೂ ಸ್ಥಾನಗೆಲ್ಲಲಾಗದೇ ನಿರಾಶೆ ಅನುಭವಿಸಿದವರು ಕಮಲಹಾಸನ್ 2021ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು. ಅವರ ಪಕ್ಷ ಕೇವಲ ಶೇ 2.6 ಮತ ಪ್ರಮಾಣಗಳಿಸಿತ್ತು. ಇದೇ ರೀತಿ ರಾಜಕೀಯಕ್ಕೆ ಬರಬೇಕೆಂಬ ಆಸೆ ಇದ್ದರೂ, ಅದರ ಕಷ್ಟ ನಷ್ಟದ ಬಗ್ಗೆ ಆಲೋಚಿಸಿ ಕೊನೆಯ ಕ್ಷಣದಲ್ಲಿ ಚುನಾವಣಾ ರಾಜಕೀಯದಿಂದ ದೂರ ಸರಿದವರು ರಜನಿಕಾಂತ್. ಸಿನಿಮಾರಂಗದಲ್ಲಿ ರಜನಿ-ಕಮಲ್ ಸಾಧಿಸಲು ಆಗದ್ದನ್ನು ಅವರಿಗಿಂತ ಕಿರಿಯರಾದ (51 ವರ್ಷ) ದಳಪತಿ ವಿಜಯ್ ಸಾಧಿಸಿದ್ದಾರೆ.ದ್ರಾವಿಡ ರಾಜಕಾರಣದ ಹೆಸರಿನಲ್ಲಿ ರಾಜ್ಯದಲ್ಲಿ ಪಾರಮ್ಯ ಸಾಧಿಸಿದ್ದ ಡಿಎಂಕೆ, ಎಐಎಡಿಎಂಕೆಯಂಥ ಪಕ್ಷಗಳನ್ನು, ಅವುಗಳ ನುರಿತ ನಾಯಕರನ್ನು ಮಣಿಸಿ, ತಮಿಳುನಾಡಿನ ಮುಖ್ಯಮಂತ್ರಿ ಗಾದಿ ಏರಲು ಸಜ್ಜಾದರೆ. ಸುಮಾರು ಆರು ದಶಕಗಳಿಂದ ತಮಿಳುನಾಡನ್ನು ಇವೆರಡೇ ಪಕ್ಷಗಳು ಆಳುತ್ತಿದ್ದವು. ಆ ಪರಂಪರೆಯನ್ನು ತುಂಡರಿಸಿರುವ ವಿಜಯ್, ಹೊಸ ಪಕ್ಷವನ್ನು ಸ್ಥಾಪಿಸಿ, ಅದನ್ನು ಅಧಿಕಾರದ ಹೊಸ್ತಿಲಿಗೆ ತಂದು ನಿಲ್ಲಿಸಿರುವುದು ಕಡಿಮೆ ಸಾಧನೆಯೇನಲ್ಲ. ಕೇವಲ ಎರಡು ವರ್ಷಗಳ ಹಿಂದೆ (2024ರಲ್ಲಿ) 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷ ಸ್ಥಾಪಿಸಿ ಪ್ರಸ್ತುತ ವಿಧಾನಸಭಾ ಚುನಾವಣೆಯಲ್ಲಿ ಎಲ್ಲ 234 ಕ್ಷೇತ್ರಗಳಲ್ಲಿ ಮೊದಲ ಬಾರಿಗೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ ಅವರು, ತಮ್ಮ ಮೊದಲ ಪ್ರಯತ್ನ ದಲ್ಲೇ ಅಚ್ಚರಿಯ, ಅನಿರೀಕ್ಷಿತವಾದ ಗೆಲುವನ್ನು ದಕ್ಕಿಸಿಕೊಂಡಿದ್ದಾರೆ. ಇದು ಅಚ್ಚರಿದಾಯಕ ಗೆಲುವು ಎಂದು ಜನರಿಗೆ ಅನ್ನಿಸಿದರೂ, ಇದರ ಹಿಂದೆ ವಿಜಯ್ ಅವರ ಸುಮಾರು ಎರಡು ದಶಕಗಳ ಪ್ರಯತ್ನ, ಪರಿಶ್ರಮ ಇದೆ. ತಂದೆ, ಸಿನಿಮಾ ನಿರ್ದೇಶಕ ಎಸ್.ಎ.ಚಂದ್ರಶೇಖರ್ ಅವರ ನೆರಳಿನಲ್ಲಿ ಬಾಲನಟನಾಗಿ ಅಡಿಯಿಟ್ಟ ವಿಜಯ್, ಚಿತ್ರರಂಗದಲ್ಲಿ ಬಹುಬೇಗ ಸ್ಟಾರ್ ಆದರು. ಕಮಲಹಾಸನ್, ರಜನಿಕಾಂತ್ ಅವರಂಥ ತಾರೆಗಳ ನಡುವೆ ತಮ್ಮದೇ ವಿಭಿನ್ನ ನಟನಾ ಶೈಲಿ ರೂಢಿಸಿಕೊಂಡರು. ಆತ್ಮವಿಶ್ವಾಸ, ಹಾಸ್ಯ ಇರುವ ವಿಶಿಷ್ಟ ಮ್ಯಾನರಿಸಂನಿಂದ ಬಹಳ ಬೇಗ ತಮಿಳು ಅಭಿಮಾನಿಗಳ ಪ್ರೀತಿ ಗಳಿಸಿ 'ದಳಪತಿ' ಎಂದು ಬಿರುದು ಗಳಿಸಿದರು. ತಮಿಳು ಚಿತ್ರರಂಗದಲ್ಲಿ ರಜನಿಕಾಂತ್ ನಂತರದ ದೊಡ್ಡತಾರೆ ಎನ್ನಿಸಿಕೊಂಡರು. ತಮ್ಮ ರಾಜಕೀಯ ಮಹತ್ವಾಕಾಂಕ್ಷೆಗೆ ಸಿನಿಮಾ ಜನಪ್ರಿಯತೆಯನ್ನೇ ಅಡಿಪಾಯ ಮಾಡಿಕೊಂಡ ವಿಜಯ್, 2009ರಲ್ಲಿ 'ವಿಜಯ್ ಮಕ್ಕಳ್ ಇಯಕ್ಕಂ' (ವಿಜಯ್ ಜನ ಚಳವಳಿ-ವಿಎಂಐ) ಎನ್ನುವ ಅಭಿಮಾನಿ ಸಂಘ ಸ್ಥಾಪಿಸಿದರು. ಅದರ 85 ಸಾವಿರ ಘಟಕಗಳು ರಾಜ್ಯದಾದ್ಯಂತ ಆರಂಭವಾದವು. ಅವುಗಳ ಮೂಲಕ ವಿಜಯ್ ಅವರು ನೆರೆ, ಬರ, ಆರ್ಥಿಕ ನೆರವು, ರಕ್ತದಾನ ಮುಂತಾದ ಸೇವಾ ಕಾರ್ಯಗಳಲ್ಲಿ ತೊಡಗಿದರು. ಅವರ ಸಿನಿಮಾ ಕಾರ್ಯಕ್ರಮಗಳಲ್ಲಿ ರಾಜಕೀಯದ ಮಾತು ಕತೆಗಳು ಕೇಳಿಬರತೊಡಗಿದವು. 'ದಳಪತಿ', ನಿರುದ್ಯೋಗ, ಬಡತನದಂಥ ಸಾಮಾಜಿಕ ಸಮಸ್ಯೆಗಳಿಂದ ಹಿಡಿದು ಜಿಎಸ್‌ಟಿ, ಪೌರತ್ವ ತಿದ್ದುಪಡಿ ಕಾಯ್ದೆಯಂಥ ರಾಷ್ಟ್ರೀಯ ವಿಚಾರಗಳನ್ನೂ ಟೀಕಿಸಿ, ತಮ್ಮದೇ ಶೈಲಿಯಲ್ಲಿ ವ್ಯಾಖ್ಯಾನಿಸುತ್ತಿದ್ದರು. 2011ರ ವಿಧಾನಸಭಾ ಚುನಾವಣೆಯಲ್ಲಿ ಎಐಎಡಿಎಂಕೆಗೆ ಬೆಂಬಲ ನೀಡುವ ಮೂಲಕ ಅಭಿಮಾನ ಮತವಾಗಿ ಪರಿವರ್ತನೆಯಾಗುವುದೇ ಎನ್ನುವುದನ್ನು ತಮ್ಮದೇ ರೀತಿಯಲ್ಲಿ ಪರೀಕ್ಷಿಸಿದ್ದರು. 2021ರಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ 169 ವಾರ್ಡ್‌ಗಳಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ವಿಎಂಐನ 115 ಮಂದಿ ಗೆಲುವು ಸಾಧಿಸಿದ್ದರು. 2024ರ ಫೆಬ್ರುವರಿಯಲ್ಲಿ ಟಿವಿಕೆ ಸ್ಥಾಪಿಸಲು ವಿಜಯ್ ಅವರಿಗೆ ಅಡಿಪಾಯ ಆಗಿದ್ದು ಈ ಗೆಲುವು. ಈಗಿನ ವಿಧಾನಸಭಾ ಚುನಾವಣೆ ಗೆಲುವು ಅವರಿಗೆ ದೊಡ್ಡ ಜವಾಬ್ದಾರಿ ಹೊರಿಸಿದೆ. ದ್ರಾವಿಡ ತಾತ್ವಿಕತೆ ಹಿನ್ನೆಲೆ ಇಲ್ಲದ, ಅಧಿಕಾರ ರಾಜಕಾರಣದ ಅನುಭವ ಇಲ್ಲದ ವಿಜಯ್ ಹೊಸ ಸವಾಲನ್ನು ಹೇಗೆ ಎದುರಿಸಲಿದ್ದಾರೆ ಎಂಬುದಕ್ಕೆ ಕಾಲವೇ ಉತ್ತರ ಹೇಳಬೇಕಿದ್ದು, ದೇಶದ ಅದರಲ್ಲೂ ತಮಿಳುನಾಡು ಜನ ಕಾದು ನೋಡಬೇಕಿದೆ.

# ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಚುನಾವಣೆ ಫಲಿತಾಂಶ: ಬಿಜೆಪಿ ವಿಜಯ ಪತಾಕೆ

**1**26 ಸದಸ್ಯ ಬಲದ ಅಸ್ಸಾಂ ವಿಧಾನ ಸಭೆಗೆ ಏಪ್ರಿಲ್ 9ರಂದು ಮತದಾನ ನಡೆದಿದೆ ಹಿಮಂತ ಬಿಸ್ವಾ ಶರ್ಮಾ ಮತ್ತು ಗೌರವ್ ಗೊಗೊಯ್ ನಡುವಿನ ನೇರ ಸ್ಪರ್ಧೆಯ ಫಲಿತಾಂಶ ಮೇ 4ರಂದು ಪ್ರಕಟವಾಗಿದೆ. ಬಿಜೆಪಿ ತನ್ನ ಮಿತ್ರಪಕ್ಷಗಳಾದ ಅಸೋಮ್ ಗಣ ಪರಿಷತ್, ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ ಮತ್ತು ರಭಾ ಹಸೋಂಗ್ ಚೌತಾ ಮಂಚ್ ಜೊತೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ಕಾಂಗ್ರೆಸ್ ಪಕ್ಷವು ರೈಜೋರ್ ದಳ, ಅಸ್ಸಾಂ ಜಾತಿಯ ಪರಿಷತ್, ಸಿಪಿಎಂ ಮತ್ತು ಸಿಪಿಐ-ಎಂಎಲ್ ಜೊತೆ ಮೈತ್ರಿ ಮಾಡಿಕೊಂಡು ಅಸ್ಸಾಂ ಸೋನ್ನಿಲಿಟೊ ಮೋರ್ಚಾವನ್ನು ರಚಿಸಿದೆ. ಬದ್ರುದ್ದೀನ್ ಅಜ್ಮಲ್ ಅವರ ಎಐಯುಡಿಎಫ್, ಟಿಎಂಸಿ, ಆಮ್ ಆದ್ಮಿ ಪಕ್ಷ ಮತ್ತು ಜಾರ್ಖಂಡ್ ಮುಕ್ತಿ ಮೋರ್ಚಾ ಕೂಡ ಚುನಾವಣೆಯಲ್ಲಿ ಸ್ಪರ್ಧಿಸಿದ್ದವು.

ಆದರೆ ಯಾರು ಊಹಿಸಲಾಗದಂತೆ ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಮೂರನೇ ಎರಡರಷ್ಟು ಬಹುಮತದೊಂದಿಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸತತ ಮೂರನೇ ಸಲ ಗೆಲುವು ದಾಖಲಿಸಿತ್ತು. 126 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿ 82, ಮಿತ್ರಪಕ್ಷಗಳಾದ ಎಜಿಪಿ ಹಾಗೂ ಬಿಪಿಎಫ್ ತಲಾ 10 ಸ್ಥಾನಗಳಲ್ಲಿ ಜಯಿಸಿತ್ತು. ಅಸ್ಸಾಂ ಮುಖ್ಯಮಂತ್ರಿಯಾಗಿ ಡಾ. ಹಿಮಂತ ಬಿಸ್ವಾಸ್ ಶರ್ಮಾ ಅವರು ಸತತ ಎರಡನೇ ಬಾರಿಗೆ ಆಯ್ಕೆಯಾಗಿದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿಎ (NDA) ಮೈತ್ರಿಕೂಟವು 126 ಸದಸ್ಯ ಬಲದ ಅಸ್ಸಾಂ ವಿಧಾನಸಭೆಯಲ್ಲಿ 102 ಸ್ಥಾನಗಳನ್ನು ಗೆದ್ದು ಐತಿಹಾಸಿಕ ಜಯಗಳಿಸಿದ ನಂತರ, ಅವರು ಮೇ 12, 2026 ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು.

ಪಶ್ಚಿಮ ಬಂಗಾಳ ಚುನಾವಣಾ ಫಲಿತಾಂಶವು ಎಲ್ಲರನ್ನೂ ಬೆಚ್ಚಿಬೀಳಿಸಿತು. ಬಿಜೆಪಿಗೂ ತಾನೇ ಇಷ್ಟು ದೊಡ್ಡ ಬಹುಮತವನ್ನು ಪಡೆಯುವುದಾಗಿ ನಿರೀಕ್ಷೆಯಿರಲಿಲ್ಲ. ಅನೇಕ ರೀತಿಯಲ್ಲಿ 2026ರ ಬಂಗಾಳ ವಿಧಾನಸಭಾ ಚುನಾವಣೆ ವರದಿ ಮಾಡಲು ಅತ್ಯಂತ ವಿಚಿತ್ರ ಚುನಾವಣೆಯಾಗಿತ್ತು. ಮತದಾರರು ತಮ್ಮ ಮನಸ್ಸಿನ ಮಾತನ್ನು ಕೊನೆಯವರೆಗೂ ಬಹಿರಂಗಪಡಿಸದ ಮೌನ ಚುನಾವಣೆಯಾಗಿದ್ದಷ್ಟೇ ಅಲ್ಲ, ಚುನಾವಣೆಗೆ ಮುನ್ನ ನಡೆದ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (SIR) ಬಳಿಕ ಮತದಾರರ ಪಟ್ಟಿಯಲ್ಲಿ ನಡೆದ ಗೊಂದಲದಿಂದ ಅಂತಿಮ ಫಲಿತಾಂಶ ಅಂದಾಜಿಸಲು ಅಸಾಧ್ಯವಾಗಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಏನಾದರೂ ಸಂಭವಿಸಬಹುದಾದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಹೀಗಾಗಿ, ಬಿಜೆಪಿ ಐತಿಹಾಸಿಕ ಜಯ ಸಾಧಿಸಿ 15 ವರ್ಷಗಳ ತೃಣಮೂಲ ಕಾಂಗ್ರೆಸ್ ಸರ್ಕಾರವನ್ನು ಉರುಳಿಸಿದಾಗ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸ್ಪರ್ಧಿಸಿದ್ದ ಭವಾನಿಪುರ ಕ್ಷೇತ್ರದಲ್ಲಿ ಸೋತಾಗ, ಅದು ಬಹುತೇಕರಿಗೆ "ಆಘಾತ"ವಾದರೂ ಅಚ್ಚರಿಯಾಯಿತು. ಆರಂಭದಲ್ಲಿ ಮಮತಾ ಆಡಳಿತದ ವಿರುದ್ಧ ಕಂಡುಬಂದ ಮೌನ ಅಸಮಾಧಾನ ಕೊನೆಗೆ ಭಾರಿ ರಾಜಕೀಯ ಸುನಾಮಿಯಾಗಿ




ಮಾರ್ಪಟ್ಟಿತು. ಬಿಜೆಪಿ 293 ಸ್ಥಾನಗಳಲ್ಲಿ 207 ಸ್ಥಾನಗಳನ್ನು ಗೆದ್ದು ಭರ್ಜರಿ ಜಯ ಸಾಧಿಸಿತು. ಇದು ಸರ್ಕಾರದ ಬದಲಾವಣೆಗೆ ಜನರು ನೀಡಿದ ಭಾರಿ ಜನಾದೇಶವಾಗಿತ್ತು. ಪಶ್ಚಿಮ ಬಂಗಾಳದಲ್ಲಿ ಮೊದಲ ಬಿಜೆಪಿ ಸರ್ಕಾರ ರಚನೆಯಾಗಿದ್ದು, ಬಿಜೆಪಿ ವಿಧಾನಮಂಡಲ ಪಕ್ಷದ ನಾಯಕ ಸುವೇಂದು ಅಧಿಕಾರಿ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಿದರು. ಕೊಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಶನಿವಾರ ನಡೆದ ಭವ್ಯ ಸಮಾರಂಭದಲ್ಲಿ ರಾಜ್ಯಪಾಲ ಆರ್.ಎನ್. ರವಿ ಅವರು ಸುವೇಂದು ಅಧಿಕಾರಿಗೆ ಪದ ಮತ್ತು ಗೌಪ್ಯತಾ ಪ್ರಮಾಣ ವಚನ ಬೋಧಿಸಿದರು. ಮುಖ್ಯಮಂತ್ರಿಯೊಂದಿಗೆ ಐವರು ಸಚಿವರೂ ಪ್ರಮಾಣ ವಚನ ಸ್ವೀಕರಿಸಿದರು. ಸಚಿವರಾದ ದಿಲೀಪ್ ಘೋಷ್, ಅಗ್ನಿಮಿತ್ರ ಪಾಲ್, ಅಶೋಕ್ ಕಿರ್ತಾನಿಯಾ, ನಿಶಿತ್ ಪ್ರಾಮಾಣಿಕ್ ಮತ್ತು ಕ್ಷುದಿರಾಮ ತುಡು ಅವರಿಗೆ ರಾಜ್ಯಪಾಲರು ಪ್ರಮಾಣ ವಚನ ಬೋಧಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಎನ್‌ಡಿಎ ಮತ್ತು ಬಿಜೆಪಿ ಆಡಳಿತದ ಇತರ ರಾಜ್ಯಗಳ ಮುಖ್ಯಮಂತ್ರಿಗಳು, ಬಿಜೆಪಿ ಅಧ್ಯಕ್ಷ ನಿತಿನ್ ನಬೀನ್ ಸೇರಿದಂತೆ ಪಕ್ಷದ ಹಲವು ನಾಯಕರು ಪ್ರಮಾಣ ವಚನ ಸಮಾರಂಭದಲ್ಲಿ ಉಪಸ್ಥಿತರಿದ್ದರು. 2026ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 207 ಸ್ಥಾನಗಳನ್ನು ಗೆದ್ದಿದ್ದು, ಇತಿಹಾಸ ನಿರ್ಮಾಣವಾಗಿದ್ದು, ಈ ಸರ್ಕಾರ ಜನಪ್ರಿಯ, ಜನೋಪಯೋಗಿ ಕಾರ್ಯಕ್ರಮಗಳ ಜೊತೆಗೆ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಎಷ್ಟರ ಮಟ್ಟಿಗೆ ಜನರನ್ನು ತಲುಪಿ ಸಾಕಾರಗೊಳ್ಳುತ್ತದೆಯೆಂದು ಕಾದು ನೋಡಬೇಕಿದೆ.

# ಅಮ್ಮ – ಬದುಕಿನ ಹೊನಲು



ಆತಂಕ, ಚಿಂತೆಗಳಿದ್ದ ದಿನಗಳೇ ಜಾಸ್ತಿ ನನ್ನ ಬದುಕಿನಲ್ಲಿ... ನಾನಾಗಿ ನಾನು ಸೃಷ್ಟಿಸಿಕೊಂಡ ಸೆರೆಮನೆಯ ಸರಳುಗಳು.. ಆರ್ಥಿಕ ಕಷ್ಟಗಳು ಮಾತ್ರವಲ್ಲ, ಅದು ತಂದೊಡ್ಡುವ ಅವಮಾನದ ಪ್ರಪಾತಗಳು, ವಿಭಿನ್ನ ರೀತಿಯ ಧರ್ಮ ಸಂಕಟಗಳು ನನ್ನನ್ನು ಕಾಡುತ್ತಿದ್ದ ಕಾಲ ಅದು... ತೀರಾ ಪಾಪರ್ ಆಗಿ ನಿಂತು ಬಿಟ್ಟಿದ್ದೆ. ಹೊಸದಾಗಿ ಪಾಪರ್ ಆದವನ ಅವಮಾನಗಳಿಗೆ ಕರೆಂಟ್ ಜಾಸ್ತಿ ಇರುತ್ತದೆ. ಯಾರಿಗೋ ಮಾಡಲು ಹೋದ ಸಹಾಯ ನನ್ನ ಎಲ್ಲ ನೆಮ್ಮದಿಗಳನ್ನೂ ನುಂಗಿ ಕೂತಿತ್ತು. ನನ್ನ ಫ್ಯಾಕ್ಟರಿ ಎಷ್ಟು ಹಣ ಹಾಕಿದರೂ ನುಂಗಿ ಕೂರುತ್ತಿತ್ತು. ಗೆಳೆಯ ಶ್ರೀನಾಥ ಮಾತ್ರ ಬರಬೇಕಾಗಿದ್ದ ಅಲ್ಪ, ಸ್ವಲ್ಪ ಬಾಕಿಗೆ ಹಾಸನ, ಶಿವಮೊಗ್ಗ, ಗುಲ್ಬರ್ಗ ಮುಂತಾದ ಊರುಗಳಿಗೆ ಕೆಂಪು ಬಸ್ಸಿನಲ್ಲಿ ಕೂರಲು ಜಾಗವಿಲ್ಲದ ಸೀಟಿನ ಮೇಲೆ ಕೂತು ತೂಕಡಿಸುತ್ತ ತಲೆಯನ್ನು ಹಿಂದಿನ ಸ್ಟೀಲ್ ರಾಡಿಗೆ ಇಡೀ ರಾತ್ರಿ ಹೊಡೆಸಿಕೊಳ್ಳುತ್ತಾ ದುಡ್ಡಿಗಾಗಿ ಓಡಾಡುತ್ತಿದ್ದ. ಅವನ ಸ್ಥಿತಿ ಕೂಡಾ ಅತ್ಯಂತ ಕಷ್ಟದಲ್ಲಿ ಇತ್ತು.

ನನಗೆ ಸಾಲ ಕೊಡುವವರೂ ಮುಗಿದು ಹೋಗಿದ್ದರು. ಪ್ರತಿನಿತ್ಯ ಅಳುವವನ ಗೋಳನ್ನು ಅನುದಿನವೂ ಕೇಳಲಾರದೆ ಮಾಯವಾಗಿದ್ದರು. ಯಾವಾಗಲೂ ಸಾಲ ಕೊಡುತ್ತಿದ್ದ ಕಿಟ್ಟಿಗೆ ಧಾರವಾಡಕ್ಕೆ ವರ್ಗವಾಗಿತ್ತು. ಮೇಷ್ಟ್ರು ನಾನು ಬರೆದ ಲೇಖನಗಳಿಗಾಗಿ ಅಲ್ಪ, ಸ್ವಲ್ಪ ಹಣ ಕೊಡುತ್ತಿದ್ದರೂ ಅದು ಯಾತಕ್ಕೂ ಸಾಕಾಗೂತ್ತಿರಲಿಲ್ಲ. ಜತೆಗೆ ಅವಮಾನದ ದೈನೇಸಿ ಸ್ಥಿತಿ ಸ್ನೇಹಗಳನ್ನೂ ಬಂಧಗಳನ್ನೂ ಕೊಲ್ಲುತ್ತದೆ.

ಹಾಗಾದಾಗ ನಾನು ಯಾರ ಬಳಿಯೂ ಹೇಳಿಕೊಳ್ಳದೆ ನಿದ್ದೆ ಇಲ್ಲದ ನಿಟ್ಟುಸಿರಿನ ಶಥಪಥಗಳನ್ನು ಹಾಕುತ್ತಾ ರಾತ್ರಿಗಳನ್ನು ಕಳೆಯುತ್ತಿದ್ದೆ.... ಯಾರಾದರೂ ಮಾತನಾಡಿಸಿದರೆ ಸಿಟ್ಟಿಗೆದ್ದು ಕೂಗಾಡಿ ಬಿಡುತ್ತಿದ್ದಂಥ ಸ್ಥಿತಿಯಲ್ಲಿ ಇರುತ್ತಿದ್ದೆ. ಇದನ್ನು ಆಗ ನಮ್ಮ ಮನೆಯಲ್ಲಿರುತ್ತಿದ್ದ ಅಮ್ಮ ಗಮನಿಸುತ್ತಿದ್ದರು. ಎರಡು ದಿನವಾದರೂ ನನ್ನ ನಿಟ್ಟುಸಿರಿನ ತಲ್ಲಣಗಳು ನಿಲ್ಲದಿದ್ದರೆ, ಗೀತಾ ಎಲ್ಲೋ ಆಚೆ ಹೋಗಿದ್ದಾಗ ಅಮ್ಮ ನನ್ನ ರೂಮೊಳಗೆ ಬಂದು "ಕಂದಾ ನಿನ್ನ ಹತ್ತಿರ ಎರಡು ನಿಮಿಷ ಮಾತನಾಡಬಹುದಾ.." ಎಂದು ಹೆದರಿಕೊಂಡೇ ಪಕ್ಕದಲ್ಲಿ ಬಂದು ಕೂರುತ್ತಿದ್ದರು. "ಏನಾಗಿದೆ ಅಪ್ಪಾಜಿ ಕಷ್ಟ..." ಎಂದು ನನ್ನ ಕೈ ಹಿಡಿದು ತಲೆ ನೇವರಿಸುತ್ತಿದ್ದರು.. ಒಮ್ಮೆಗೇ ಕಟ್ಟಿಕೊಂಡಿದ್ದ ಆತಂಕಗಳೆಲ್ಲಾ ನನ್ನ ಕಣ್ಣಲ್ಲಿ ನೀರಾಗಿ ತುಂಬಿಕೊಳ್ಳುತ್ತಿತ್ತು. ಅಮ್ಮ ನನ್ನನ್ನು ತೊಡೆಯ ಮೇಲೆ ಮಲಗಿಸಿಕೊಳ್ಳುತ್ತಿದ್ದರು.

"ಕಂದಾ, ಅಳಬೇಡ... ನಾನು ಇಲ್ಲವಾ... ಕಷ್ಟ ನಿನ್ನೊಬ್ಬನಿಗೇ ಅಲ್ಲ ಬರೋದು.. ನಿನಗಿಂತ ನೂರು ಪಟ್ಟು ಕಷ್ಟ ಇರುವವರನ್ನು ತೋರಿಸಲಾ.. ಕೆಲವು ದಿನ ಸಹಿಸಿಕೋ... ದೇವರ ಮೇಲೆ ಭಾರ ಹಾಕು.. ಎಲ್ಲಾ ಸರಿ ಮಾಡುತ್ತಾನೆ... ಅಷ್ಟು ಕಷ್ಟವಾದರೆ ಊರಿನಲ್ಲಿ ಇರುವ ಅರ್ಧ ಜಮೀನು ಮಾರಿ ಬಿಡೋಣ... ನನಗೆ ಇನ್ನೂ ಶಕ್ತಿ ಇದೆ.. ನಿನ್ನ ಕಷ್ಟ ಕಡಿಮೆ ಮಾಡುತ್ತೇನೆ... ಕೆಲವು ದಿನ ಸಹಿಸಿಕೋ" ಎಂದು ಹಣೆ ನೇವರಿಸುತ್ತಿದ್ದರು. ನನ್ನ ಕಣ್ಣು ಒರೆಸುತ್ತಿದ್ದರು. (ಯಾವುದೋ ಧರ್ಮ ಸಂಕಟ ದಲ್ಲಿ ಸಿಕ್ಕಿ ಹಾಕಿಕೊಂಡಿದ್ದೆ. ನಾನು ಊರಿನ ಆಸ್ತಿ ಮುಟ್ಟುವುದು ನನಗೆ ಇಷ್ಟವಿರಲಿಲ್ಲ.)

ನನ್ನನ್ನು ಕಂದಾ, ಅಪ್ಪಾಜಿ ಎಂದು ಅಮ್ಮ ತೊಡೆಯ ಮೇಲೆ ಮಲಗಿಸಿಕೊಂಡಾಗ ನಾನು ಕಂದನೂ ಅಲ್ಲ, ಮಗುವೂ ಅಲ್ಲ. ನಲವತ್ತೆರಡು ವರ್ಷ. ನನಗೆ ಆಗ... ಹತ್ತು ವರ್ಷ, ಹನ್ನೆರಡು ವರ್ಷದ ಮಕ್ಕಳು... ತಪ್ಪು ನಿರ್ಧಾರಗಳಿಂದ ಪಾಪರ್ ಆಗಿ ನಿಂತಿದ್ದೆ. ಬೆಂಗಳೂರಿನ ನನ್ನ ಬಾಡಿಗೆ ಮನೆ ಬಸವೇಶ್ವರನಗರದ ಬಳಿಯ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿತ್ತು. ಲಿಜ್ಜತ್ ಹಪ್ಪಳದ ಕಾರಖಾನೆಯ ಕಛೇರಿ ನಮ್ಮ ಮನೆಯ ಬಳಿಯೇ ಇತ್ತು. ಹಪ್ಪಳ ಲಟ್ಟಿಸುವ ಕೆಲಸ ಸಿಗುತ್ತದೇನೋ ನೋಡಬೇಕೆಂದು ಗೀತಾ ಕೆಲವು ದಿನಗಳಿಂದ ಓಡಾಡುತ್ತಿದ್ದಳು. ನಾನು ಲಂಕೇಶ್ ಪತ್ರಿಕೆಗೆ ವಾರಬಿಟ್ಟು ವಾರ ಅಣಕಗಳೆಂಬ ವಿಡಂಬನಾ ಲೇಖನಗಳನ್ನು ಬರೆಯುತ್ತಿದ್ದೆ. ತಿಂಗಳಿಗೆ ಆರು ನೂರು ಕೊಡುತ್ತಿದ್ದರು. ಆದರೆ ಮನೆ ಬಾಡಿಗೆ ಒಂಭೈನೂರು. ಹೈರಾಣಾಗಿಬಿಟ್ಟಿದ್ದೆ. ಆ ದಿನಗಳಲ್ಲಿ ಬೆಳಕು ಮುಗಿದು, ಅಮ್ಮನ ತೊಡೆಯ ಮೇಲೆ ತಲೆ ಇಟ್ಟು ಕಣ್ಣಲ್ಲಿ ನೀರು ತುಂಬಿ ಮಲಗಿದಾಗ ಹಣೆ ನೇವರಿಸಿ ಅಮ್ಮ ಸಮಾಧಾನ ಹೇಳದಿದ್ದರೆ ಏನಾಗುತ್ತಿತ್ತೋ ತಿಳಿಯದು. ಇರುತ್ತಿದ್ದೆನೋ ಇಲ್ಲವೋ. ಸಹಿಸಿಕೋ ಕೆಲವು ದಿನ ಎಲ್ಲಾ ಸರಿ ಹೋಗುತ್ತದೆ ಎಂದು ಅಮ್ಮ ಹೇಳಿದ ಕೆಲವೇ ತಿಂಗಳಿಗೆ ತೀರಾ ಅನಿರೀಕ್ಷಿತವಾಗಿ ಪವಾಡವೆಂಬಂತೆ ನನ್ನ ಮೊದಲ ಧಾರಾವಾಹಿ 'ಮುಖಾಮುಖಿ' ನಿರ್ದೇಶನ ಮಾಡಲು ಅವಕಾಶ ಸಿಕ್ಕಿತು. ಗೆಳೆಯ ಗುರು ಮತ್ತು ಗೆಳೆಯ ಶೆಣೈ ಆ ಅವಕಾಶ ತಂದುಕೊಟ್ಟವರು. ಮುಖಾಮುಖಿ ಎಲ್ಲರಿಗೂ ಇಷ್ಟವಾಗಿ ಅದ್ಭುತ ಗೆಲುವು ಕಂಡಿತು.

ನೆಮ್ಮದಿಯ ದಿನಗಳು ಕಾಣಲು ಶುರುವಾಯಿತು. ಹಿಂತಿರುಗಿ ನೋಡಿದ್ದು ಕಡಿಮೆ. ಮತ್ತೆ ಬದುಕಿನಲ್ಲಿ ಮೆಟ್ಟಿಲುಗಳನ್ನು ಏರತೊಡಗಿದೆ. ನನ್ನ ಎಲ್ಲ ಧಾರಾವಾಹಿಗಳೂ ಮೊದಲ ಸ್ಥಾನ ಪಡೆದು ಎಲ್ಲರೂ ನನ್ನನ್ನು ಆದರಿಸಲು ಶುರು ಮಾಡಿದ್ದೆ ನೆನಪು. ನನ್ನನ್ನು ಹಾಗೆ ಅನೇಕ ಬಾರಿ ಸಂಕಟದ ಸಮಯದಲ್ಲಿ ಬದುಕಲು ಧೈರ್ಯ ಕೊಟ್ಟಿದ್ದು ಅಮ್ಮ. ಅಮ್ಮ ಹೋಗಿ ಹನ್ನೆರಡು ವರ್ಷ ಮುಗಿಯಿತು. ಈಗಲೂ ತೀರಾ ತಲ್ಲಣದ ದಿನಗಳಲ್ಲಿ ಅಮ್ಮನ ನೆನಪು ತುಂಬಾ ಆಗುತ್ತದೆ. ಕನಸಲ್ಲಿ ಬರುತ್ತಾರೆ. ಧೈರ್ಯ ಬರುತ್ತದೆ. ಹುಣ್ಣಿಮೆಗಳೆಂದರೆ ಅಮ್ಮನಿಗೆ ಮುಂಚಿನಿಂದಲೂ ಇಷ್ಟ. ಹೋಳಿ ಹುಣ್ಣಿಮೆಯಂದೇ ಹೋಗಿಬಿಟ್ಟರು. ಇಂದು ಹೆಣ್ಣು ಮಕ್ಕಳ ದಿನ. ಅಮ್ಮನ ದಿನ. ನಂತರದ ದಿನಗಳಲ್ಲಿ ಗೆಲ್ಲುವ ಹೆಣ್ಣು ಮಕ್ಕಳ ಕಥೆ ಮಾಡಿದೆ.

ಬರುವ ಬಾಗಿಲು ಮಣ್ಣು
ಬಿಡುವ ಬಾಗಿಲು ಮಣ್ಣು ॥
ನಡುವೆ ಕಾಯುವುದು ತಾಯ ಕಣ್ಣು...।
(ಒಂದು ಹಳೆಯ ಬರಹ)

**(ಕೃಪೆ: ಟಿ.ಎನ್. ಸೀತಾರಾಂ ಫೇಸ್‌ಬುಕ್‌ನಿಂದ)**

# ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ನಿಟ್ಟೂರು ಗ್ರಾಮದ ಈ ಬಂಡೆ ಶಾಸನವನ್ನು ತಜ್ಞರು ಓದಿದ್ದಾರೆ




ಇದು ಎಂಟನೇ ಶತಮಾನದ ರಾಷ್ಟ್ರಕೂಟರ ಒಂದನೇ ಕೃಷ್ಣನ ಕಾಲದ ಶಾಸನವೆಂದು ತಿಳಿದುಬಂದಿದೆ. (ಒಂದನೇ ಕೃಷ್ಣ ತಲಕಾಡು ಗಂಗರ ಶ್ರೀಪುರುಷನ ಸಮಕಾಲೀನ) ವಿವರಗಳು ಇಲ್ಲಿವೆ: ಇದು ಒಂದನೇ ಕೃಷ್ಣ ಅವರ ಕಾಲದ ಅತ್ಯಂತ ಮಹತ್ವದ ಪ್ರಾಚೀನ ಶಾಸನಗಳಲ್ಲಿ ಒಂದಾಗಿದೆ. ಅವರು ರಾಷ್ಟ್ರಕೂಟ ಸಾಮ್ರಾಜ್ಯದ ಶಕ್ತಿಶಾಲಿ ರಾಜರಾಗಿದ್ದು, ಕ್ರಿ.ಶ. 8ನೇ ಶತಮಾನದಲ್ಲಿ ದಕ್ಷಿಣ ಭಾರತದ ಬಹುಭಾಗವನ್ನು ಆಳಿದರು. ನಿಟ್ಟೂರು ಗ್ರಾಮದ ಬಳಿ ಪತ್ತೆಯಾದ ಈ ಶಾಸನವು ಕನ್ನಡ ಇತಿಹಾಸದ ದೃಷ್ಟಿಯಿಂದ ವಿಶೇಷ ಮಹತ್ವ ಹೊಂದಿದೆ. ಇದು ಕೆಳಗಿನ ವಿಷಯಗಳಿಗೆ ಸಾಕ್ಷಿಯಾಗಿದೆ: ಆಡಳಿತ ಭಾಷೆಯಾಗಿ ಪ್ರಾಚೀನ ಕನ್ನಡದ ಬಳಕೆ. ರಾಷ್ಟ್ರಕೂಟರ ಕಾಲದ ಭೂದಾನ ಪದ್ಧತಿ. ಪ್ರಾದೇಶಿಕ ಆಡಳಿತ ವಿಭಾಗಗಳು ಧಾರ್ಮಿಕ ಪುಣ್ಯ ಮತ್ತು ಶಾಪವಾಕ್ಯಗಳ ಸಂಪ್ರದಾಯ ಈ ಶಾಸನದ ಮುಖ್ಯ ಅಂಶಗಳು: ಇದು ಅಕಾಲವರ್ಷ ಕೃಷ್ಣ ಪ್ರಥಮ (ಕ್ರಿ.ಶ. 756–774) ಅವರ ಕಾಲದ ಶಾಸನವಾಗಿದೆ. ರಾಜನು ಒಬ್ಬ ವ್ಯಕ್ತಿಗೆ 12 ಮತ್ತರು ನೀರಾವರಿ ಭೂಮಿಯನ್ನು ದಾನ ಮಾಡಿದ ದಾಖಲೆಯಾಗಿದೆ. ಭೂಮಿಯನ್ನು ರಾಜಮಾನ (ರಾಜಕೀಯ ಅಳತೆ ಪದ್ಧತಿ) ಪ್ರಕಾರ ಅಳೆಯಲಾಗಿದೆ. ದಾನದೊಂದಿಗೆ ಉಂಚಭೋಗ ಹಕ್ಕುಗಳನ್ನೂ ನೀಡಲಾಗಿದೆ.

"100" ಮತ್ತು "70" ಅಂತ್ಯ ಹೊಂದಿರುವ ಎರಡು ಆಡಳಿತ ವಿಭಾಗಗಳ ಉಲ್ಲೇಖವಿದೆ. ನಿಟ್ಟೂರು ಪ್ರದೇಶವನ್ನು ಆಡಳಿತ ನಡೆಸುತ್ತಿದ್ದ ಅಧಿಕಾರಿಯ ಉಲ್ಲೇಖವೂ ಕಾಣಿಸುತ್ತದೆ. ಶಾಸನದ ಕೊನೆಯಲ್ಲಿ ಸಾಮಾನ್ಯವಾಗಿ ಕಾಣುವ ಧಾರ್ಮಿಕ ಶಾಪ ವಾಕ್ಯವಿದೆ: ಈ ದಾನವನ್ನು ನಾಶ ಮಾಡುವವರು ವಾರಾಣಾಸಿಯಲ್ಲಿ ಸಾವಿರ ಬ್ರಾಹ್ಮಣರು ಹಾಗೂ ಸಾವಿರ ಗೋವುಗಳನ್ನು ಕೊಂದ ಪಾಪಕ್ಕೆ ಒಳಗಾಗುತ್ತಾರೆ. ಈ ದಾನವನ್ನು ರಕ್ಷಿಸುವವರು ಅಶ್ವಮೇಧ ಯಾಗ ಮಾಡಿದ ಪುಣ್ಯವನ್ನು ಪಡೆಯುತ್ತಾರೆ. ಈ ಶಾಸನವು ಅಶೋಕನ ಶಾಸನದ ಇರುವ ಪ್ರದೇಶದ ಸಮೀಪದಲ್ಲಿರುವುದರಿಂದ, ಮೌರ್ಯರಿಂದ ರಾಷ್ಟ್ರಕೂಟರ ಕಾಲದವರೆಗೆ ಈ ಪ್ರದೇಶದ ಐತಿಹಾಸಿಕ ಮಹತ್ವವನ್ನು ತೋರಿಸುತ್ತದೆ. ಇದಲ್ಲದೆ, ಕ್ರಿ.ಶ. 8ನೇ ಶತಮಾನದಲ್ಲಿಯೇ ಕನ್ನಡ ಭಾಷೆ ಆಡಳಿತ ಭಾಷೆಯಾಗಿ ಬಲವಾಗಿ ಸ್ಥಾಪಿತವಾಗಿದ್ದುದನ್ನು ಈ ಶಾಸನ ಸ್ಪಷ್ಟಪಡಿಸುತ್ತದೆ. ಅಧ್ಯಯನಕಾರರೆಲ್ಲರಿಗೂ ತೆಕ್ಕಲಕೋಟೆ ಮತ್ತು ನಿಟ್ಟೂರಿನ ಜನತೆಯ ಪರವಾಗಿ ತುಂಬು ಹೃದಯದ ಧನ್ಯವಾದಗಳು...

**ಮಾಹಿತಿಗಾಗಿ: Manjunath Doddamani, ಮನು ತೆಕ್ಕಲಕೋಟೆ ಅವರ ಫೇಸ್‌ಬುಕ್ ಪೋಸ್ಟ್‌ನಿಂದ ಪಡೆದ ಮಾಹಿತಿ ಮತ್ತು ಚಿತ್ರಗಳು.**

# ಬೆಂಗಳೂರು ತ್ಯಾಜ್ಯ ನಿರ್ವಹಣೆ ಗುತ್ತಿಗೆ ನಿಯಮ ಉಲ್ಲಂಘನೆ



**ಹ**ಣಕಾಸು ಇಲಾಖೆಯ ಎಚ್ಚರಿಕೆಯನ್ನು ನಿರ್ಲಕ್ಷಿಸಿ, ರಾಜ್ಯ ಸರ್ಕಾರವು ರೂ. 39,437 ಕೋಟಿ ವೆಚ್ಚದ ಘನತ್ಯಾಜ್ಯ ನಿರ್ವಹಣೆಯ ಎರಡು ಬೃಹತ್ ಗುತ್ತಿಗೆಗಳಿಗೆ ಅನುಮೋದನೆ ನೀಡಿದೆ. ಹೆಚ್ಚಾದ ವೆಚ್ಚ, ವಾರ್ಷಿಕ ಏರಿಕೆ ಮತ್ತು ಒಂದೇ ಸಂಸ್ಥೆಯೊಂದಿಗೆ ದೀರ್ಘಾವಧಿಯ ಒಪ್ಪಂದ ಬೇಡ ಎಂದು ಹಣಕಾಸು ಇಲಾಖೆ ಎಚ್ಚರಿಕೆ ನೀಡಿತ್ತು. ಆದರೂ ಹೈದರಾಬಾದ್‌ನ ರಾಮ್‌ಕೀ ಗ್ರೂಪ್‌ನ ಸೋದರ ಸಂಸ್ಥೆಯಾದ ದಿಲ್ಲಿ ಎಂಎಸ್‌ಡಬ್ಲ್ಯು ಸಲ್ಯೂಷನ್ಸ್ ಲಿಮಿಟೆಡ್‌ಗೆ ಗುತ್ತಿಗೆ ನೀಡಲಾಗಿದ್ದು, ನಗರ ದಲ್ಲಿ ಪ್ರತಿನಿತ್ಯ 5,200 ಟನ್ ತ್ಯಾಜ್ಯವನ್ನು ಸಂಸ್ಕರಿಸುವುದು ಮತ್ತು ವಿಲೇವಾರಿ ಮಾಡುವ ಕಾರ್ಯವನ್ನು ಮುಂದಿನ 30 ವರ್ಷ ಸಂಸ್ಥೆ ನಿರ್ವಹಿಸಲಿದೆ. ಸರ್ಕಾರದ ಆಂತರಿಕ ಟಿಪಣಿಗಳು ಪತ್ರಿಕೆಗೆ ಲಭ್ಯವಾಗಿದ್ದು, ಸಚಿವ ಸಂಪುಟ ದಲ್ಲಿ ಈ ಗುತ್ತಿಗೆಯ ಅನುಮೋದನೆಗೆ ಮಂಡಿಸುವ ಮುನ್ನ, ನಗರಾಭಿವೃದ್ಧಿ ಇಲಾಖೆ ಗುತ್ತಿಗೆಯ ಪ್ರಸ್ತಾವ ಸಲ್ಲಿಸಿದಾಗ ಹಣಕಾಸು ಇಲಾಖೆ ನಾಲ್ಕು ಪ್ರಮುಖ ಅಕ್ಷೇಪಗಳನ್ನು ದಾಖಲಿಸಿದೆ. ಅಲ್ಲದೆ, ಈ ಪ್ರಸ್ತಾವವನ್ನು ಪರಿಶೀಲಿಸಲು ತಜ್ಞರ ಸಮಿತಿಯನ್ನು ರಚಿಸಬೇಕು ಎಂದು ಸಲಹೆ ನೀಡಿತ್ತು. ಇದೆಲ್ಲದರ ನಡುವೆಯೂ ಸಚಿವ ಸಂಪುಟ ಪ್ರಸ್ತಾವಕ್ಕೆ ಅನುಮೋದನೆ ನೀಡಿದೆ. ಗುತ್ತಿಗೆ ಆರಂಭವಾಗುವ ಮೊದಲೇ ಅತಿಹೆಚ್ಚು ವೆಚ್ಚವನ್ನು ಮಾಡುವ ಬಗ್ಗೆ ಆರ್ಥಿಕ ಇಲಾಖೆ ಪ್ರಮುಖ ಆಕ್ಷೇಪಣೆ ದಾಖಲಿಸಿತ್ತು. ಯಲಹಂಕ, ದಾಸರಹಳ್ಳಿ, ಪೂರ್ವ ಮತ್ತು ಪಶ್ಚಿಮ ವಲಯಗಳನ್ನು ಒಳಗೊಂಡ ಉತ್ತರ ಪ್ಯಾಕೇಜ್‌ನ ಅಂದಾಜು ವೆಚ್ಚ ರೂ. 17.982.90 ಕೋಟಿ ಎಂದು ನಗರಾಭಿವೃದ್ಧಿ ಇಲಾಖೆ ನಮೂದಿಸಿದೆ. ಆದರೆ, ರೂ. 21.444 ಕೋಟಿಗೆ ಬಿಡ್ ಮಾಡಲಾಗಿದ್ದು, ರೂ. 3,461 ಕೋಟಿ ಮೂಲ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿದೆ. ಇದೇ ರೀತಿ ಆರ್.ಆರ್. ನಗರ, ಮಹದೇವಪುರ, ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯಗಳನ್ನು ಒಳಗೊಂಡ ದಕ್ಷಿಣ ಪ್ಯಾಕೇಜ್‌ನ ಅಂದಾಜು ವೆಚ್ಚ ರೂ. 15.065 ಕೋಟಿ. ರೂ. 17,993.33 ಕೋಟಿಗೆ ಬಿಡ್ ಸಲ್ಲಿಸಲಾಗಿದ್ದು, ರೂ. 2.928 ಕೋಟಿ ಹೆಚ್ಚಿನ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ. ಒಟ್ಟಾರೆ, 26.389 ಕೋಟಿ ವೆಚ್ಚ ಹೆಚ್ಚಾಗಿದೆ.

ಮುಂದಿನ ವರ್ಷಗಳ 30 ಅವಧಿಯಲ್ಲಿ ಪ್ರತಿ ವರ್ಷವೂ ಶೇ 5ರಷ್ಟು ಹೆಚ್ಚು ಮಾಡುವ ಒಪ್ಪಂದದ ಬಗ್ಗೆಯೂ ಹಣಕಾಸು ಇಲಾಖೆ ಅಕ್ಷೇಪ ಸಲ್ಲಿಸಿದೆ. ಮುಂದಿನ 30 ವರ್ಷಗಳಿಗೆ ಈ ರೀತಿ ಹೆಚ್ಚಳಕ್ಕೆ ಒಪ್ಪಿಗೆ ನೀಡಿದರೆ, ಪ್ರಸ್ತುತ ದರಕ್ಕಿಂತ ನಾಲ್ಕೂವರೆ ಪಟ್ಟು ಹೆಚ್ಚಾಗಲಿದೆ. ರಿಯಾಯಿತಿ ಅವಧಿಯಲ್ಲಿ ಶೇ 430ರಷ್ಟು ದರ ಹೆಚ್ಚಳವಾಗುತ್ತದೆ ಎಂದು ಎಚ್ಚರಿಕೆ ನೀಡಿದೆ. ಒಂದೇ ಸಂಸ್ಥೆಗೆ ಎರಡೂ ಗುತ್ತಿಗೆ ಗಳನ್ನು ನೀಡಿರುವುದರಿಂದ ಒಂದೇ ಸಂಸ್ಥೆಯ ಮೇಲೆ ಅವಲಂಬಿತವಾಗುವ ಪರಿಸ್ಥಿತಿ ನಿರ್ಮಾಣ ವಾಗಲಿದೆ. ಇದು ಬೆಂಗಳೂರಿನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಮೂರು ದಶಕ ಒಟ್ಟು ವ್ಯಕ್ತಿ ಅಥವಾ ಸಂಸ್ಥೆಯ ನಿಯಂತ್ರಣಕ್ಕೆ ನೀಡಿದಂತಾಗುತ್ತದೆ ಎಂದು ಆರ್ಥಿಕ ಇಲಾಖೆ ಆತಂಕ ವ್ಯಕ್ತಪಡಿಸಿದೆ.

ಸರ್ಕಾರವೇ ಸೌಲಭ್ಯಗಳಿಗಾಗಿ ಭೂಮಿ ಯನ್ನು ಒದಗಿಸುತ್ತಿರುವಾಗ ಮತ್ತು ಖಾಸಗಿ ಹೂಡಿಕೆಯು ಅಷ್ಟೇನೂ ಹೆಚ್ಚಿಲ್ಲದಿರುವಾಗ, ಇಷ್ಟು ಸುದೀರ್ಘ ಅವಧಿಯ ಒಪ್ಪಂದದ ಅಗತ್ಯವೇನು ಎಂದು ಪ್ರಶ್ನಿಸಿರುವ ಹಣಕಾಸು ಇಲಾಖೆ, ಗುತ್ತಿಗೆಯ ಅವಧಿಯನ್ನು 30 ವರ್ಷಗಳಿಂದ 10 ವರ್ಷಗಳಿಗೆ ಕಡಿತಗೊಳಿಸಲು ಮತ್ತು ವಾರ್ಷಿಕ ವೆಚ್ಚದ ಏರಿಕೆಯನ್ನು ಶೇ 2.5ಕ್ಕೆ ಮಿತಿಗೊಳಿಸಲು ಶಿಫಾರಸು ಮಾಡಿದೆ. ಮತ್ತೊಂದೆಡೆ, ಬೆಂಗಳೂರಿನ ಹದಗೆಡುತ್ತಿರುವ ಕಸದ ಬಿಕ್ಕಟ್ಟನ್ನು ಉಲ್ಲೇಖಿಸಿ ನಗರಾಭಿವೃದ್ಧಿ ಇಲಾಖೆಯು ಈ ಪ್ರಸ್ತಾವವನ್ನು ಸಮರ್ಥಿಸಿಕೊಂಡಿದೆ. ನಗರದಲ್ಲಿ ಪ್ರತಿದಿನ ಸುಮಾರು 5.200 ಟನ್ ಕಸ ಉತ್ಪಾದನೆಯಾಗುತ್ತದೆ. ಆದರೆ, 1,800 ಟನ್‌ಗಳಷ್ಟು ಮಾತ್ರ ವೈಜ್ಞಾನಿಕವಾಗಿ ಸಂಸ್ಕರಿಸಲಾಗುತ್ತಿದೆ. ಉಳಿದ ತ್ಯಾಜ್ಯವೆಲ್ಲವೂ ಭೂಭರ್ತಿ ಪ್ರದೇಶಕ್ಕೆ ಸೇರುತ್ತಿದೆ. ಈ ಯೋಜನೆಯು ಸರ್ಕಾರದ ಮೇಲೆ ಯಾವುದೇ ಆರ್ಥಿಕ ಹೊರೆಯನ್ನು ಹೇರುವುದಿಲ್ಲ ಮತ್ತು ಇದರ ಸಂಪೂರ್ಣ ವೆಚ್ಚವನ್ನು ಐದು ನಗರ ಪಾಲಿಕೆಗಳೇ ಭರಿಸಲಿವೆ ಎಂದು ಹೇಳಿದೆ. ನಗರಾಭಿವೃದ್ಧಿ ಇಲಾಖೆಯ ವಾದವನ್ನು ಒಪ್ಪದ ಹಣಕಾಸು ಇಲಾಖೆಯು, ಸಚಿವ ಸಂಪುಟದ ಅನುಮೋದನೆಗೂ ಮುನ್ನ ಈ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ತಜ್ಞರು ಮತ್ತು ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸುವಂತೆ ಸರ್ಕಾರಕ್ಕೆ ಸಲಹೆ ನೀಡಿತ್ತು. ಈ ಮಧ್ಯೆ ಕಳೆದ ಗುರುವಾರವೇ ಸಚಿವ ಸಂಪುಟವು ಈ ಪ್ರಸ್ತಾವಕ್ಕೆ ಅನು ಮೋದನೆ ನೀಡಿದೆ ಎಂದು ಸರ್ಕಾರದ ಮೂಲ ಗಳು ತಿಳಿಸಿವೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕಡತದ ನಡವಳಿಕೆಗೆ ಇನ್ನೂ ಸಹಿ ಹಾಕಿಲ್ಲ ಎಂದು ಬಲ್ಲ ಮೂಲ ಗಳಿಂದ ತಿಳಿದುಬಂದಿದೆ.

**(ಲೇಖನ ಕೃಪೆ : ಪ್ರಜಾವಾಣಿ/ನವೀನ್ ಮಿನೇಜಸ್)**

# ದೇಶದ ಎರಡನೇ ಅತಿ ದೊಡ್ಡ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಶಂಕುಸ್ಥಾಪನೆ



**ದೇ**ಶದ ಎರಡನೇ ಅತಿ ದೊಡ್ಡ ಕ್ರಿಕೆಟ್ ಸ್ಟೇಡಿಯಂಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು.

ನಗರದ ಹೃದಯಭಾಗದಲ್ಲಿರುವ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಕಳೆದ ಬಾರಿ ಐಪಿಎಲ್ ಚಾಂಪಿಯನ್ ಪಟ್ಟ ಅಲಂಕರಿಸಿದ ಹಿನ್ನೆಲೆಯಲ್ಲಿ ನಡೆದ ವಿಜಯೋತ್ಸವದ ವೇಳೆ ಕಾಲ್ತುಳಿತ ಸಂಭವಿಸಿತ್ತು. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಹೊರವಲಯದ ಆನೇಕಲ್ ತಾಲ್ಲೂಕಿನ ಸೂರ್ಯನಗರದ 4ನೇ ಹಂತದಲ್ಲಿ ಈ ಕ್ರೀಡಾಂಗಣ ನಿರ್ಮಾಣಕ್ಕೆ ಶಂಕುಸ್ಥಾಪನೆಗೆ ಚಾಲನೆ ನೀಡಲಾಗಿದೆ.

ಗುಜರಾತ್‌ನ ಅಹ್ಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ 1.32 ಲಕ್ಷ ಸೀಟು ಸಾಮರ್ಥ್ಯ ಹೊಂದಿದೆ. ಆನೇಕಲ್ ಬಳಿ ತಲೆಯೆತ್ತಲಿರುವ ಈ ಸ್ಟೇಡಿಯಂ ಸಾಮರ್ಥ್ಯ 80 ಸಾವಿರ ಆಸನಗಳನ್ನು ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ.

ಮೊದಲ ಹಂತದಲ್ಲಿ ಕ್ರಿಕೆಟ್ ಸ್ಟೇಡಿಯಂ ಕ್ರೀಡಾಂಗಣದ ಮುಂಭಾಗ ರಾಜ್ಯದ ಕಲೆ ಸಾಂಸ್ಕೃತಿಕ ಬಿಂಬಿಸುವ ಪರಂಪರೆ, ಕ್ರಿಕೆಟ್‌ನ ಇತಿಹಾಸ ವಿನ್ಯಾಸ, 2ನೇ ಹಂತದಲ್ಲಿ ಒಳಾಂಗನ ಕ್ರೀಡಾಂಗಣ ಈಜುಕೊಳ ಹಾಗೂ ಬೃಹತ್ ಸಮಾವೇಶ ಸಭಾಂಗಣ ನಿರ್ಮಿಸಲಾಗಿತ್ತು. ಇದಕ್ಕೆ ಕೆಹೆಚ್‌ಬಿ ಸೂರ್ಯ ಕ್ರೀಡಾ ಗ್ರಾಮ ಎಂದು ನಾಮಕರಣ ಮಾಡಲಾಗಿದೆ.

ಈ ಕ್ರೀಡಾಂಗಣ ವೆಚ್ಚ 9,43.46 ಕೋಟಿ ವೆಚ್ಚವಾಗಲಿದೆ. ಈ ಕ್ರೀಡಾಂಗಣ ನಿರ್ಮಾಣಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಮೇಲಿನ ಒತ್ತಡ ಕಡಿಮೆ ಮಾಡಲು ಹಾಗೂ ವರ್ಷಪೂರ್ತಿ ಜಾಗತಿಕ ಮಟ್ಟದ ಕ್ರೀಡಾ ಪಂದ್ಯಗಳನ್ನು ಆಯೋಜಿಸಲು ನಗರದ ಹೊರವಲಯದಲ್ಲಿ ಈ ಬೃಹತ್ ಕ್ರೀಡಾಂಗಣ ತಲೆಯೆತ್ತಲಿದೆ.

ಸಚಿವರಾದ ಡಾ. ಜಿ. ಪರಮೇಶ್ವರ್, ಬಿ.ಜೆಡ್. ಜಮೀರ್ ಅಹ್ಮದ್ ಖಾನ್, ಮಾಜಿ ಸಂಸದ ಡಿ.ಕೆ. ಸುರೇಶ್, ಶಾಸಕರಾದ ಬಿ. ಶಿವಣ್ಣ, ಎಂ. ಕೃಷ್ಣಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಎಸ್‌ಐಆರ್‌ಗೆ ಸುಪ್ರೀಂಕೋರ್ಟ್ ಅಸ್ತು

**ದೇ**ಶದಲ್ಲಿ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಇಂದು ಅತ್ಯಂತ ಮಹತ್ವದ ತೀರ್ಪೊಂದನ್ನು ನೀಡಿದೆ. ಮತದಾರರ ಪಟ್ಟಿಗಳ 'ವಿಶೇಷ ತೀವ್ರ ಪರಿಷ್ಕರಣೆ' ನಡೆಸಲು ಕೇಂದ್ರ ಚುನಾವಣಾ ಆಯೋಗಕ್ಕೆ ಇರುವ ಕಾನೂನಾತ್ಮಕ ಅಧಿಕಾರವನ್ನು ಸರ್ವೋಚ್ಚ ನ್ಯಾಯಾಲಯವು ಎತ್ತಿಹಿಡಿದಿದೆ. ಚುನಾವಣಾ ಆಯೋಗದ ಈ ಕ್ರಮವು ಮುಕ್ತ ಮತ್ತು ಪಾರದರ್ಶಕ ಚುನಾವಣೆಗಳನ್ನು ನಡೆಸುವ ಸಾಂವಿಧಾನಿಕ ಆಶಯವನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.



ಕಳೆದ ವರ್ಷ ಜೂನ್ ತಿಂಗಳಲ್ಲಿ ಬಿಹಾರದಲ್ಲಿ 'ವಿಶೇಷ ತೀವ್ರ ಪರಿಷ್ಕರಣೆ' ನಡೆಸಲು ಚುನಾವಣಾ ಆಯೋಗ ಹೊರಡಿಸಿದ್ದ ಅಧಿಸೂಚನೆಯನ್ನು ಸವಾಲು ಮಾಡಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು ಈ ಮಹತ್ವದ ತೀರ್ಪು ಪ್ರಕಟಿಸಿದೆ.

ತೀರ್ಪು ಪ್ರಕಟಿಸಿ ಮಾತನಾಡಿದ ಸಿಜೆಐ ಸೂರ್ಯ ಕಾಂತ್, "ವಿಶೇಷ ಕಾರಣಗಳನ್ನು ದಾಖಲಿಸಿ, ತನಗೆ ಸೂಕ್ತವೆನಿಸುವ ರೀತಿಯಲ್ಲಿ ಯಾವುದೇ ಸಮಯದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸಲು ಕಾನೂನಿನಲ್ಲೇ ಅವಕಾಶವಿದೆ. ಸಾಂವಿಧಾನಿಕ ವಿಧಿ 324 ಮತ್ತು ಜನಪ್ರತಿನಿಧಿ ಕಾಯ್ದೆ 1950ರ ಸೆಕ್ಷನ್ 21(3)ರ ಅಡಿಯಲ್ಲಿ ಆಯೋಗಕ್ಕೆ ಈ ಅಧಿಕಾರವಿದೆ. ಹೀಗಾಗಿ ಆಯೋಗವು ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಕೆಲಸ ಮಾಡಿದೆ ಎನ್ನಲಾಗದು" ಎಂದು ಸ್ಪಷ್ಟಪಡಿಸಿದರು.

"ಕೇವಲ ಮತದಾನ ಪ್ರಕ್ರಿಯೆಯನ್ನು ಸುಸೂತ್ರವಾಗಿ ನಡೆಸುವುದು ಮಾತ್ರ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯಲ್ಲ. ಮತದಾರರ ಪಟ್ಟಿಯ ನಿಖರತೆ, ವಿಶ್ವಾಸಾರ್ಹತೆ ಹಾಗೂ ಪಾವಿತ್ರ್ಯತೆಯೇ ಪ್ರಜಾಪ್ರಭುತ್ವದ ಅಡಿಪಾಯವಾಗಿದೆ. ಕಳೆದ ನಾಲ್ಕು ದಶಕಗಳಿಂದ ಇಂತಹ ತೀವ್ರ ಪರಿಷ್ಕರಣೆ ನಡೆದಿರಲಿಲ್ಲ.

ನಗರೀಕರಣ ಮತ್ತು ವಲಸೆಯಿಂದಾಗಿ ಮತದಾರರ ಹೆಸರುಗಳು ದುಪ್ಪಟ್ಟಾಗುವ ಸಾಧ್ಯತೆ ಇರುವುದರಿಂದ ಆಯೋಗ ಕೈಗೊಂಡಿರುವ ಈ ಕ್ರಮ ನ್ಯಾಯಸಮ್ಮತವಾಗಿದೆ" ಎಂದು ಕೋರ್ಟ್ ಹೇಳಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ರಾಜಕೀಯ ಕಾರ್ಯಕರ್ತ ಯೋಗೇಂದ್ರ ಯಾದವ್, ಸಂಸದರಾದ ಮಹುವಾ ಮೊಯಿತ್ರಾ, ಮನೋಜ್ ಝಾ, ಕೆ.ಸಿ. ವೇಣುಗೋಪಾಲ್, ಸುಪ್ರಿಯಾ ಸುಳೆ ಸೇರಿದಂತೆ ಹಲವರು ಈ ಪ್ರಕ್ರಿಯೆಯನ್ನು ವಿರೋಧಿಸಿ ಕೋರ್ಟ್ ಮೆಟ್ಟಿಲೇರಿದ್ದರು.

ಇದು ಚುನಾವಣಾ ಆಯೋಗದ ಮೂಲಕ ಕದ್ದುಮುಚ್ಚಿ ನಡೆಸುತ್ತಿರುವ ಪೌರತ್ವ ಪರಿಶೀಲನೆ ಪ್ರಕ್ರಿಯೆಯಾಗಿದೆ. ಈಗಾಗಲೇ ಮತದಾರರ ಪಟ್ಟಿಯಲ್ಲಿ ಹೆಸರಿರುವ ನಾಗರಿಕರು ಮತ್ತೆ ತಮ್ಮ ಪೌರತ್ವವನ್ನು ಸಾಬೀತುಪಡಿಸಲು ದಾಖಲೆ ನೀಡುವುದನ್ನು ಕಡ್ಡಾಯಗೊಳಿಸುವುದು ಕಾನೂನುಬಾಹಿರ.

ಪರಿಶೀಲನೆ ನೆಪದಲ್ಲಿ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಟ್ಟರೆ, ಯಾವುದೇ ಸಮರ್ಥ ಪ್ರಾಧಿಕಾರದ ಆದೇಶವಿಲ್ಲದೆಯೇ ಒಬ್ಬ ನಾಗರಿಕನ ಮೂಲಭೂತ ಪ್ರಜಾಪ್ರಭುತ್ವದ ಹಕ್ಕನ್ನು ಕಸಿದುಕೊಂಡಂತಾಗುತ್ತದೆ.

ಜನಪ್ರತಿನಿಧಿ ಕಾಯ್ದೆಯಡಿ ನಿರ್ದಿಷ್ಟ ಕ್ಷೇತ್ರ ಅಥವಾ ಅದರ ಭಾಗಕ್ಕೆ ಮಾತ್ರ 'ವಿಶೇಷ ಪರಿಷ್ಕರಣೆ' ನಡೆಸಬಹುದು. ಆದರೆ ಆಯೋಗವು ಇಡೀ ರಾಜ್ಯಾದ್ಯಂತ ಇದನ್ನು ಜಾರಿಗೊಳಿಸುತ್ತಿರುವುದು ನಿಯಮಗಳಿಗೆ ವಿರುದ್ಧವಾಗಿದೆ.

ಅರ್ಜಿದಾರರ ಆರೋಪಗಳನ್ನು ಸಂಪೂರ್ಣವಾಗಿ ನಿರಾಕರಿಸಿದ ಚುನಾವಣಾ ಆಯೋಗವು ತನ್ನ ನಿಲುವನ್ನು ಬಲವಾಗಿ ಸಮರ್ಥಿಸಿಕೊಂಡಿದೆ.

ಇದು ಪೌರತ್ವ ನಿರ್ಧಾರವಲ್ಲ: ಇದು ದೇಶದಿಂದ ಹೊರಹಾಕುವ ಅಥವಾ ಪೌರತ್ವ ನಿರ್ಣಯಿಸುವ ಪ್ರಕ್ರಿಯೆಯಲ್ಲ. ಕೇವಲ ಅರ್ಹ ನಾಗರಿಕರು ಮಾತ್ರ ಮತದಾರರ ಪಟ್ಟಿಯಲ್ಲಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಚುನಾವಣಾ ಪ್ರಕ್ರಿಯೆಯಾಗಿದೆ.

ಇದರಲ್ಲಿ ಯಾವುದೇ ಪೊಲೀಸ್ ಹಸ್ತಕ್ಷೇಪವಿಲ್ಲ. ಕೇವಲ ಚುನಾವಣಾ ಅಧಿಕಾರಿಗಳು ನಿಯಮಾನುಸಾರ, ಜನರಿಗೆ ತೊಂದರೆಯಾಗದಂತೆ 'ಮೃದು ಧೋರಣೆ'ಯ ಮೂಲಕ ಪರಿಶೀಲನೆ ನಡೆಸುತ್ತಿದ್ದಾರೆ.

ಈಗಾಗಲೇ ಬಿಹಾರ, ಕೇರಳ, ತಮಿಳುನಾಡು, ಪುದುಚೇರಿ ಮತ್ತು ಪಶ್ಚಿಮ ಬಂಗಾಳದಲ್ಲಿ ಈ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಉತ್ತರ ಪ್ರದೇಶ, ಗುಜರಾತ್, ರಾಜಸ್ಥಾನ ಸೇರಿದಂತೆ ಹಲವು ರಾಜ್ಯಗಳಲ್ಲಿ ಪ್ರಸ್ತುತ ಈ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಹಿಂದೆ ಜನವರಿ 29 ರಂದು ಸುಪ್ರೀಂಕೋರ್ಟ್ ಈ ಪ್ರಕರಣದ ತೀರ್ಪನ್ನು ಕಾಯ್ದಿರಿಸಿತ್ತು.

# ಮೇ ಮಳೆ ಹಾವಳಿ: ಮಳೆಗಾಲಕ್ಕೂ ಮುನ್ನವೇ ಬೆಂಗಳೂರಿಗೆ ಸಂಕಷ್ಟ



ಐಟಿ ನಗರಿ ಬೆಂಗಳೂರು ಈ ಬಾರಿ ಮೇ ತಿಂಗಳಲ್ಲೇ ಭಾರೀ ಮಳೆಯ ಹೊಡೆತಕ್ಕೆ ತತ್ತರಿಸಿತು. ಮಳೆಗಾಲ ಅಧಿಕೃತವಾಗಿ ಆರಂಭವಾಗುವ ಮುನ್ನವೇ ಸುರಿದ ಭಾರೀ ಮಳೆ, ಗಾಳಿ ಹಾಗೂ ಗುಡುಗು ಸಹಿತ ಮಳೆಯ ಪರಿಣಾಮ ನಗರದ ಅನೇಕ ಪ್ರದೇಶಗಳು ಜಲಾವೃತವಾದವು. ರಸ್ತೆಗಳ ಮೇಲೆ ನೀರು ನಿಂತು ಸಂಜೆ ವೇಳೆ ಮತ್ತು ರಾತ್ರಿ ವಾಹನ ಸವಾರರು ಸಂಕಷ್ಟ ಅನುಭವಿಸಿದರು. ನಗರದ ಹಲವು ಭಾಗಗಳಲ್ಲಿ ಮರಗಳು ಉರುಳಿ ಬಿದ್ದ ಪರಿಣಾಮ ಸಂಚಾರ ಅಸ್ತವ್ಯಸ್ತಗೊಂಡಿತು. ಕೆರೆಗಳು ತುಂಬಿ ಹರಿದ ಕಾರಣ ಕೆಲವು ಬಡಾವಣೆಗಳಲ್ಲಿ ಮನೆಗಳಿಗೆ ನೀರು ನುಗ್ಗಿದ ಘಟನೆಗಳೂ ವರದಿಯಾದವು. ವಿಶೇಷವಾಗಿ ಹೊರವಲಯ ಪ್ರದೇಶಗಳಲ್ಲಿ ನೀರು ಹರಿಯುವ ಕಾಲುವೆಗಳು ಮುಚ್ಚಿಕೊಂಡಿದ್ದರಿಂದ ಮಳೆಯ ನೀರು ರಸ್ತೆಗಳ ಮೇಲೆಯೇ ನಿಂತಿತು. ನಗರದ ಎಲ್ಲಾ ಭಾಗಗಳಲ್ಲಿ 9 ಸೆಂ.ಮೀ.ಕ್ಕಿಂತ ಹೆಚು ಮಳೆ ದಾಖಲಾಗಿದೆ. ಮಳೆ ಮಾತ್ರವಲ್ಲದೆ ಬಿರುಗಾಳಿಯೂ ಜನರನ್ನು ಬೆಚ್ಚಿಬೀಳಿಸಿತು. ಕೆಲವೆಡೆ ಆಲಿಕಲ್ಲು ಮಳೆಯೂ ಸುರಿದಿದ್ದು, ವಾಹನಗಳು ಹಾಗೂ ಬೆಳೆಗಳಿಗೆ ಹಾನಿಯಾಗಿದೆ. ಹವಾಮಾನ ಇಲಾಖೆ ಮುಂದಿನ ದಿನಗಳಲ್ಲಿಯೂ ಸಹ ದಕ್ಷಿಣ ಒಳನಾಡಿನ ನಗರಗಳಲ್ಲಿ ಮತ್ತು ಕರ್ನಾಟಕದಲ್ಲಿ ಭಾರೀ ಮಳೆಯ ಸಾಧ್ಯತೆ ಇದೆ ಎಂದು ಮುನ್ನೆಚ್ಚರಿಕೆ ನೀಡಿದೆ.

ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು ವೇಗವಾಗಿ ವಿಸ್ತರಿಸುತ್ತಿರುವುದರಿಂದ ನೈಸರ್ಗಿಕ ನೀರು ಹರಿವು ಮಾರ್ಗಗಳು ಕುಂಠಿತವಾಗಿವೆ. ಕೆರೆಗಳ ಒತ್ತುವರಿ, ಮಳೆನೀರು ಕಾಲುವೆಗಳ ಅಸಮರ್ಪಕ ನಿರ್ವಹಣೆ ಹಾಗೂ ಅತಿಯಾದ ಕಾಂಕ್ರೀಟೀಕರಣದಿಂದ ಮಳೆ ನೀರು ಸರಾಗವಾಗಿ ಹರಿಯಲು ಜಾಗವಿಲ್ಲದೆ ಮಳೆ ನೆರೆ ಹಾವಳಿ ಹೆಚ್ಚಲು ಪ್ರಮುಖ ಕಾರಣಗಳಾಗಿವೆ ಎಂಬ ಅಭಿಪ್ರಾಯ ತಜ್ಞರಿಂದ ವ್ಯಕ್ತವಾಗಿದೆ. ಮಳೆಯ ಅಬ್ಬರದಿಂದ ಒಂದೆಡೆ ತಂಪಾದ ವಾತಾವರಣ ಸೃಷ್ಟಿಯಾದರೂ, ಇನ್ನೊಂದೆಡೆ ನಗರ ಮೂಲಸೌಕರ್ಯದ ದೌರ್ಬಲ್ಯ ಮತ್ತೆ ಬಹಿರಂಗವಾಗಿದೆ. ಪಾಲಿಕೆ ಅಧಿಕಾರಿ ಸಿಬ್ಬಂದಿ ಸೂಕ್ತ ವ್ಯವಸ್ಥೆ ಮಾಡಲಾಗಿದ್ದರೂ ಅತಿ ಹೆಚ್ಚು ರೆಂಬೆ ಕೊಂಬೆ ಮುರಿದು ಬಿದ್ದು ಸಾಕಷ್ಟು ವಾಹನ ಮತ್ತು ಸಾರ್ವಜನಿಕ ಕಟ್ಟಡಗಳಿಗೆ ಹಾನಿಯುಂಟು ಮಾಡಿರುತ್ತದೆ. ಪ್ರತಿ ವರ್ಷ ಮಳೆಯ ಸಮಯದಲ್ಲಿ ಎದುರಾಗುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂಬ ಒತ್ತಾಯ ಸಾರ್ವಜನಿಕರಿಂದ ಕೇಳಿಬರುತ್ತಿದೆ. ಇತ್ತೀಚೆಗೆ ಮೇ 17–19 ರಿಂದ ಸುರಿದ ಮಳೆ IMD ಯೆಲ್ಲೋ ಅಲರ್ಟ್ ನೀಡಿದ್ದರೂ ಗುಡುಗು, ಸಿಡಿಲುನಿಂದ ಭಾರೀ ಮಳೆ ಆರಂಭ. ನಂತರ ಮೇ 20–24 ರಿಂದ ತೀವ್ರ ಮಳೆ, ರಸ್ತೆಗಳೆಲ್ಲಾ ಜಲಾವೃತ, ಸಂಚಾರ ಅಸ್ತವ್ಯಸ್ತ, ಮರಗಳು. ತದನಂತರ ಮೇ 23–27 : ದಕ್ಷಿಣ ಒಳನಾಡು ಕರ್ನಾಟಕಕ್ಕೆ ಭಾರೀ ಮಳೆ ಹಾಗೂ ಗಾಳಿಯ ಬೆಂಗಳೂರು ಸೇರಿ ಹಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆ ಸುರಿದು..

ಮೇ 25–29 ಅವಧಿಯಲ್ಲಿ ಬೆಂಗಳೂರಿಗೆ ಯೆಲ್ಲೋ ಅಲರ್ಟ್ ಮುಂದುವರಿಕೆಯಾಗಿದ್ದರೂ ಪ್ರತಿದಿನ ಸಂಜೆ–ರಾತ್ರಿ ಧಾರಾಕಾರ ಮಳೆ ಮತ್ತು ಗಾಳಿಯಿಂದ ಹಾನಿಗೊಂಡಿರುತ್ತದೆ. ಭಾರೀ ಗುಡುಗು ಮಳೆಯಿಂದ ಟ್ರಾಫಿಕ್ ಸಮಸ್ಯೆ, ನೀರು ನಿಲ್ಲುವಿಕೆ, ಮರ ಉರುಳಿದ ಘಟನೆಗಳು. ಇನ್ನು ಮುಂಗಾರಿನ ಮಳೆಗಾಲದಲ್ಲಿ ಬೆಂಗಳೂರಿಗೆ ಇನ್ನೇನು ಸಂಕಷ್ಟ ಕಾಡಲಿದೆಯೋ ಕಾದುನೋಡಬೇಕಿದೆ.

# ನಬಾಟಿಯನ್ನರ ನಾಡಿನಲ್ಲಿ (ಮಧ್ಯಪ್ರಾಚ್ಯದ ರಹಸ್ಯಗಳು)

## ಸಾಹಸಿ ಕನ್ನಡಿಗನೊಬ್ಬನ ಪ್ರವಾಸಿ ಕಥನ




**(ಹಿಂದಿನ ಸಂಚಿಕೆಯಿಂದ)**

ಮಧ್ಯಪ್ರಾಚ್ಯಗೆ... ಭೇಟಿ ನೀಡುವ ಪ್ರತಿಯೊಬ್ಬನೂ ನೋಡಲೇಬೇಕಾದ, ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ನಬಾಟಿಯನ್ನರೆಂಬ (Nabataean) ನಾಗರೀಕತೆಯಿಂದ ನಿರ್ಮಿಸಲ್ಪಟ್ಟ, ಸುಣ್ಣದ ಕಲ್ಲುಗಳಲ್ಲಿ ಸೃಷ್ಟಿಯಾದ ಅದ್ಬುತ ಲೋಕಕ್ಕೆ. ಅದರೆಸರು ಪೆಟ್ರಾ (PETRA).

ಪೆಟ್ರಾ..... ಕ್ರಿಸ್ತಪೂರ್ವ ಆರನೇ ಶತಮಾನದಿಂದ ಹೆಚ್ಚೂ ಕಮ್ಮಿ ಕ್ರಿಸ್ತಶಕ ಒಂದನೇ ಶತಮಾನದವರೆಗೂ ಅಲೆಮಾರಿ ಅರಬ್ ಜನಾಂಗವೊಂದು ವಾಸಿಸುತ್ತಿತ್ತು. ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಕೊಂಡಿದ್ದ ಈ ಜನಾಂಗ ಕ್ರಮೇಣ ಕ್ರಿ.ಪೂ. ಒಂದನೇ ಶತಮಾನದ ಹೊತ್ತಿಗೆ ನೆಲೆನಿಂತು ರಾಜಧಾನಿಯನ್ನಾಗಿ ಮಾಡಿಕೊಂಡ ನಗರವೇ ಪೆಟ್ರಾ. ಹಾಗೇ ಮೂಲ ಪೆಟ್ರಾವನ್ನು ನಿರ್ಮಿಸಿದ ಜನರೇ ನಬಾಟಿಯನ್ನರು. Geographically ಪೆಟ್ರಾ ಅಂದಿನ ಸಮಕಾಲೀನ ಜಗತ್ತಿನ ಮೂರು ಖಂಡಗಳಾದ ಆಫ್ರಿಕಾ, ಯುರೋಪು, ಏಷ್ಯಾದ ಸಾಮ್ರಾಜ್ಯಗಳಾದ ಗ್ರೀಕ್, ರೋಮನ್, ಈಜಿಪ್ಟ್ ಹಾಗೂ ಮೆಸಪಟೋಮಿಯಾ (Today's Iraq) ದೊಂದಿಗೆ ವಾಣಿಜ್ಯ ವಹಿವಾಟುಗಳ ಸಂಪರ್ಕಕೊಂಡಿಯಾಗಿತ್ತು. ಜಗತ್ತಿನ ಅತೀ ದೊಡ್ಡ ವಾಣಿಜ್ಯ ವಿನಿಮಯ ನಡೆಯುತ್ತಿದ್ದ ದಾರಿಯದು. ರೋಮನ್ ದೊರೆ ಟ್ರೋಜನ್ ಈ ದಾರಿಯನ್ನು ದುರಸ್ತಿ ಮಾಡಿ KINGS HIGHWAY ಎಂದು ಕರೆದಿದ್ದ. ಪೆಟ್ರಾ ನಬಾಟಿಯನ್ನರ ನಂತರ ಕಾಲಾಂತರದಲ್ಲಿ ಅಸ್ಸೀರಿಯನ್ನರು, ಬ್ಯಾಬಿಲೋನಿಯನ್ನರು, ರೋಮನ್ನರು, ಬೈಜಾಂಟೀನಿಯನ್ನರು, ಉಮ್ಮಾಯದ್ ಸಾಮ್ರಾಜ್ಯ, ಒಟ್ಟೋಮನ್ ಟರ್ಕರು, ಬ್ರಿಟೀಷರು ನಂತರ ಇದೀಗ ಸ್ವತಂತ್ರ ಜೋರ್ಡಾನಿನ ಆಳ್ವಿಕೆಗೊಳಪಟ್ಟಿದೆ. ಪ್ರತಿ ಕೈ ಬದಲಾದಾಗಲೂ ಪೆಟ್ರಾ ಅದರದೇ ಆದ ಧರ್ಮ, ವಾಸ್ತುಶಿಲ್ಪ, ಆಚಾರ, ವಿಚಾರದ ಬದಲಾವಣೆಗೆ ಒಳಪಟ್ಟಿದೆ. ಇನ್ನು ಪೆಟ್ರಾದ ಸೌಂದರ್ಯ ಪದಗಳಲ್ಲಿ ಬಣ್ಣಿಸಲಸಾಧ್ಯ. ಹತ್ತು ಹಲವು ಬಣ್ಣದ ಕಲ್ಲುಗಳನ್ನು ಐದು ಕಿಲೋ ಮೀಟರುಗಳಷ್ಟು ಉದ್ದಕ್ಕೂ ಹತ್ತಿರತ್ತಿರ ನೂರು ಮೀಟರಿನಷ್ಟು ಎತ್ತರಕ್ಕೂ ವಿವಿಧ ರೀತಿಯಲಿ ಕೊರಕಲಿನಂತೆ (Gorge) ಕೊರೆದು ಅಲ್ಲಲ್ಲಿ ರೋಮನ್ ವಾಸ್ತುಶಿಲ್ಪದ Columnಗಳಂತಹ ರಚನೆಗಳನ್ನು ಕೆತ್ತಿ, ಅಲ್ಲಲ್ಲಿ ಶಿಲ್ಪಾಕೃತಿಗಳು, ಗುಹೆಗಳು, ಸಮಾಧಿಗಳು, ಚರ್ಚು, ಆಂಫಿಥಿಯೇಟರುಗಳು, ಟೆಂಪಲ್ಲುಗಳ ಸಮಗ್ರ ಸೌಂದರ್ಯವೇ ಪೆಟ್ರಾ. ಮೇಲ್ನೋಟಕ್ಕೆ ದೊಡ್ಡ ಪ್ರವಾಹವೊಂದು ಸುಣ್ಣದಕಲ್ಲಿನ ದೊಡ್ಡ ಬೆಟ್ಟವನ್ನು ಕೊರಕಲಿನಂತೆ ಕೊರೆದುಕೊಂಡು ಹೋಗಿ ನೈಸರ್ಗಿಕವಾಗಿ ಸೃಷ್ಟಿಸಿದಂತೆ (Like Natural Canyon) ಕಾಣುತ್ತೆ ಪೆಟ್ರಾದ ಆರಂಬಿಕ ಹಾದಿ. ಇದನ್ನು ಅದನ್ನು Al-Siq ಅನ್ನುತ್ತಾರೆ. ಇದು ಆರಂಭದಿಂದ ಸುಮಾರು 1.2 ಕಿ.ಮೀವರೆಗೂ ಸಾಗುತ್ತದೆ. ಆ್ಯಕ್ಚುವಲಿ ಈ ಹಾದಿಯಲ್ಲಿ ಸಾಗೋದೆ ಒಂದು ರೋಮಾಂಚನ. ಮೂಲ ನಬಾಟಿಯನ್ನರು ಪರ್ವತಗಳ ಅಧಿಪತಿ ದುಶಾರ (Dushara) ಎಂಬ ದೇವರ ಆರಾಧಕರಾಗಿದ್ದರು ಮತ್ತು ಹಲವು ಬಗೆಯ ವಿಗ್ರಹಗಳ ಆರಾಧಕರಾಗಿದ್ದರು. ಈ Al-Siq canyon ನ ಸುಣ್ಣದ ಕಲ್ಲಿನ ಬಣ್ಣಗಳು ಮನಮೋಹಕ. ಅದರಲ್ಲೂ ನೂರುಮೀಟರ್ ಎತ್ತರದ, ಕೆಂಪು, ಅರಿಷಿನ, ಕೇಸರಿ, ಪಿಂಕು, ಕಪ್ಪು, ಬಿಳಿಯ ಹಲವು ಶೇಡುಗಳ ಈ ಸೃಷ್ಟಿ ಸೂರ್ಯನ ನೆರಳು ಬೆಳಕಿನ ಆಟದಲ್ಲಿ ಎಂತವರನ್ನೂ ಮಂತ್ರ ಮುಗ್ಧರನ್ನಾಗಿಸುತ್ತವೆ. Al-Siq ಮುಗಿಯುತ್ತಿದ್ದಂತೆ ಸೂರ್ಯನ ಬೆಳಕಿನಲ್ಲಿ ಮುತ್ತು ರತ್ನಗಳ ರಾಶಿಯೇ ಹೊಳೆಯುತ್ತಿರುವಂತೆ ರೋಮನ್ Columnಗಳ ದೊಡ್ಡ ಕೆತ್ತನೆಯೊಂದು ಬಂಡೆ ಕಲ್ಲುಗಳ ನಡುವಿನಿಂದ ಕಾಣುತ್ತೆ. ಅದೇ Al-Khazneh(Treasury). ನಬಾಟಿಯನ್ನರ ಕೈಯಲ್ಲಿ ಮೂಡಿದ ಅದ್ಭುತವಾದ ರೋಮನ್ ಶೈಲಿಯ ವಾಸ್ತುಶಿಲ್ಪ. ಅಲ್ಲಿಂದ ಮುಂದಕ್ಕೆ ಸಾಲು ಸಾಲು ಗುಹೆಗಳು, ಸಮಾಧಿಗಳು.


ಅಲ್ಲೇ ಒಂದೊಂದು ಕಡೆ ಬಿಗ್ ಟೆಂಪಲ್ಲು, Sacrificing Chamber, ಚರ್ಚ್‌ನ ಪಳೆಯುಳಿಕೆಗಳು. ಬಹುತೇಕ ರೋಮನ್ Amphitheatreಗಳು ಕಲ್ಲುಗಳಿಂದ ನಿರ್ಮಿಸಲಾಗಿರುತ್ತವೆ. ಆದರೆ ಬಂಡೆಕಲ್ಲೊಂದನ್ನೇ ಕೆತ್ತಿ (Carved) ನಿರ್ಮಿಸಿದ ಜಗತ್ತಿನ ಏಕೈಕ Amphitheatre ಇರೋದು ಪೆಟ್ರಾದಲ್ಲಿ. ಅದನ್ನು ದಾಟಿ ಕಡಿದಾದ ದಾರಿಯಲ್ಲಿ ಸಾವಿರದಷ್ಟು ನಿರ್ದಿಷ್ಟ ಆಕಾರವಿಲ್ಲದ ಮೆಟ್ಟಿಲುಗಳನ್ನು ದಾಟಿ ನಡೆದರೆ ಸಿಗೋದು Ad-Dier(Monastery). ಕಡಿದಾದ ರಸ್ತೆಯಲ್ಲಿ ಕತ್ತೆ ಕುದುರೆಗಳ ಸಾಗಾಟದ ಮಧ್ಯದಲ್ಲಿ Monastery ತಲುಪಿದ್ದೇವೆಂದರೆ ಸ್ಟಾರ್ಟಿಂಗ್ ಪಾಯಿಂಟಿನಿಂದ ಐದು ಕಿಲೋ ಮೀಟರ್ ನಡೆದಿದ್ದೇವೆ ಎಂದೇ ಅರ್ಥ. ವಾಪಾಸು ನಡೆಯಬೇಕಾದ ದೂರವೂ ಸೇರಿದರೆ ಅದು ಹತ್ತು ಕಿ.ಮೀ.ಗಳ ಮ್ಯಾರಥಾನ್ ಇದ್ದಂತೆ. ನಡೆಯಲು ಆಗದವರಿಗೆ ಕತ್ತೆ, ಕುದುರೆಗಳೂ ಇವೆ. ಅರೇಬಿಯನ್ ಹೆಂಗಸೊಬ್ಬಳು ಕುದುರೆ ಓಡಿಸಿಕೊಂಡು ಹೋಗುತ್ತಿದ್ದಳು. ಅವಳದು ಕುದುರೆ ಮೇಲೆ ಬೆಟ್ಟ ಹತ್ತಿ ಇಳಿದು ಜನರನ್ನು ಸಾಗಿಸೋ ಬ್ಯುಸಿನೆಸ್ಸು. ಗಟ್ಟಿಗಿತ್ತಿ. ಅಲ್ಲೊಬ್ಬ ಅಜ್ಜ Rababah ಎನ್ನುವ ಒಂದೇ ಖಣಡುಟಿಂ ನ ಅರೇಬಿಕ್ ಸಂಗೀತ ವಾದ್ಯವನ್ನು ಅದ್ಭುತವಾಗಿ ನುಡಿಸುತ್ತಿದ್ದ. ಕುದುರೆ ಬಾಲದಿಂದ ಮಾಡಿದ ಬಿಲ್ಲಿನಂತಹ ಕಡ್ಡಿಯಿಂದ String ಗೆ ಉಜ್ಜಿ ಹೊಮ್ಮಿಸುವ ನಾದವದು. ಅಲ್ಲಲ್ಲಿ ಕೆಲವರು Bottle Sand Art ಕಲಾವಿದರು. ಬಾಟಲೊಂದರಲ್ಲಿ ವಿವಿಧ ಬಣ್ಣದ ಮರಳುಗಳನ್ನು ತುಂಬಿ ನಿಮಗೆ ಬೇಕಾದ ಹೆಸರು ಚಿತ್ರಗಳನ್ನು ಅಲ್ಲೇ ಬರೆದು ಕೊಡುತ್ತಾರೆ. ಪೆಟ್ರಾದ ನೆನಪಿಗಾಗಿ ಮನೆಗೊಂದು ಸ್ಯಾಂಡ್ ಬಾಟಲ್ ಅನ್ನೂ, ಒಂದಷ್ಟು ONYX ಐಟೆಮ್ಮುಗಳನ್ನೂ ತೆಗೆದುಕೊಂಡು ವಾಪಾಸು ಹೊರಟೆ. ಇಲ್ಲಿನ ಪ್ರತಿಯೊಂದು ಕೆತ್ತನೆಗಳಿಗೂ ಒಂದೊಂದು ಇತಿಹಾಸ ಇದೆ. ಸರಿಯಾಗಿ ಪೆಟ್ರಾವೊಂದನ್ನೇ ನೋಡಲು ನಾಲ್ಕೈದು ದಿನಬೇಕು. ನಮಗೊಬ್ಬ ಗೈಡ್ ಸಿಕ್ಕಿದ್ದ. ನಮ್ಮ ಎಂಟೈರ್ ಜೋರ್ಡಾನು ಪ್ರವಾಸದಲ್ಲಿ ಸಿಕ್ಕಿದ ಬೆಸ್ಟ್ ರಿಸೋರ್ಸ್ ಪರ್ಸನ್ ಆತ. ಮೋಥ್ ಅಮ್ಮಾರಿನ್ (Moath Ammarin) ಅಂತೆಸರು. ನನಗೀಗ ಫೇಸ್‌ಬುಕ್ ಫ್ರೆಂಡ್ ಕೂಡ. ನಬಾಟಿಯನ್ನರ ಇತಿಹಾಸ, ಸಮಕಾಲೀನ ಇತಿಹಾಸ, ಜಿಯಾಗ್ರಫಿ, ಜಿಯಾಲಜಿಯನ್ನು ಅದ್ಭುತವಾಗಿ ಮಂಡಿಸಿದ್ದ.



ಆತನ ಇಂಗ್ಲೀಷು ಅಷ್ಟೇ ಅದ್ಭುತ. ಪೆಟ್ರಾ UNESCO ವಿಶ್ವ ಪಾರಂಪರಿಕ ತಾಣವೂ ಹೌದು. ಘೋಷಿಸಿದಂತೆಯೇ ಪೆಟ್ರಾ ಜಗತ್ತಿನ ವಿಸ್ಮಯಗಳಲ್ಲಿ ಒಂದು. ಪೆಟ್ರಾದೊಳಗೆ ನಡೆದೇ ತಿರುಗಾಡಿದ್ದರಿಂದ ಕಾಲಿಗೆ ಕರೆಂಟು ಹೊಡೆದಂತಾಗಿತ್ತು. ನಮ್ಮನ್ನೊತ್ತ ಕಾರು ಜೋರ್ಡಾನಿನ ದಕ್ಷಿಣಭಾಗದಲ್ಲಿರುವ ಮರುಭೂಮಿಗೆ ಬಂದಾಗ ಸೂರ್ಯ ಮನೆಗೆ ಹೋಗುವ ಹಂತಕ್ಕೆ ಬಂದು ತಲುಪಿದ್ದ.

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುತ್ತದೆ)**

**ಲೇಖಕರು:ದಿವಿನ್ ಮಗ್ಗಲಮಕ್ಕಿ, ಚಿಕ್ಕಮಗಳೂರು**



# ತ್ಯಾಗರಾಜರ ಆರಾಧನೆ : ಬೆಂಗಳೂರು ನಾಗರತ್ನಮ್ಮ

## ದೊರೆಗಳು ಅವರನ್ನು (ತ್ಯಾಗರಾಜರನ್ನು) ಆರಾಧಿಸಿದರು.
## ಸಂಗೀತಗಾರರು ಅವರ ಕೀರ್ತನೆಗಳನ್ನು ಮಾರಾಟ ಮಾಡಿ ಹಣವಂತರಾದರು.

(**ತ**ಮಿಳಿನ ಮಾಲನ್ ಎಂಬ ಲೇಖಕ ತಿರುವಯ್ಯಾರಿನಲ್ಲಿರುವ ತ್ಯಾಗರಾಜರ ಬೃಂದಾವನವನ್ನು ನೋಡಿ ಬರೆದ ಕಾವ್ಯದ ಸಾಲುಗಳಿವು:)

ಸೋಜಿಗವೆಂದರೆ, ಈ ದೇಗುಲ ಇವರ್‍ಯಾರೂ ಕಟ್ಟಿದ್ದಲ್ಲ. ಓರ್ವ ದೇವದಾಸಿ ಕುಲದ ಹೆಣ್ಣುಮಗಳು ಕಟ್ಟಿದ್ದು? ಇವು ಈ ಪುಸ್ತಕದ ಕಡೆಯ ಸಾಲುಗಳೂ ಹೌದು. ಇದೇ ತರಹದ ಮಾತುಗಳನ್ನು 'ಸೂಳೆಕೆರೆ' ಕಟ್ಟಿಸಿದ ದೇವದಾಸಿ ಹೆಣ್ಣುಮಗಳಿಗೆ, ರಾಮಕೃಷ್ಣಾಶ್ರಮ ಕಟ್ಟಿಸಿದ ಬೆಸ್ತರ ಹೆಣ್ಣುಮಗಳಿಗೆ ಇಂಥದೇ ದೇವೋಪಕಾರಿ ಕೆಲಸಗಳನ್ನು ಮಾಡಿರುವ ಅದೆಷ್ಟೋ ಕೆಳಸ್ತರದ ಹೆಣ್ಣುಜೀವಗಳನ್ನು ಕುರಿತು ಹೇಳಬಹುದು. ಹಾಗೆಯೇ ಅವರನ್ನು ಸ್ಮರಿಸಿಕೊಳ್ಳದ, ಜಾತಿಬಾವಿಯಲ್ಲಿ ಮಿಂದು ಎಲ್ಲವನ್ನೂ ಒರೆಸಿಕೊಂಡು ಹೋಗುವ ಮಡಿವಂತರಿಗೂ ಇಲ್ಲಿಯ ಕೆಲಮಾತುಗಳು ತಾಗುತ್ತವೆ. ಇಡೀ ಕೃತಿಯಲ್ಲಿ ಇಂತಹ ಹತ್ತಾರು ಸಂಗತಿಗಳಿವೆ. ಮುಖ್ಯಾಮುಖ್ಯದ ಆಯ್ಕೆ ಓದುಗರನ್ನು ಅವಲಂಬಿಸಿದೆ.

"ಬೆಂಗಳೂರು ನಾಗರತ್ನಮ್ಮ" ಎಂಬ ಕನ್ನಡದ ಅಪ್ರತಿಮ ಸಂಗೀತ ಕಲಾವಿದೆಯ ಹೆಸರು ಕನ್ನಡಿಗರಿಗೆ ಅಪರಿಚಿತವಾದರೂ ಅಂಧ್ರಪ್ರದೇಶ ಮತ್ತು ತಮಿಳುನಾಡಿನ ರಸಿಕರ ಪಾಲಿಗೆ ಸದಾ ಸ್ಮರಣೆಯಲ್ಲಿದೆ. ಕರ್ನಾಟಕದ ಕಪಿಲಾ ನದಿ ತೀರದ ನಂಜನಗೂಡಿನಲ್ಲಿ ಬ್ರಾಹ್ಮಣ ವಕೀಲರೊಬ್ಬರ ಉಪಪತ್ನಿಯಾಗಿದ್ದ, ದೇವದಾಸಿ ಸಮುದಾಯದ ಕೋಲಾರ ಮೂಲ ಅಥವಾ ಹೆಗ್ಗಡದೇವನಕೋಟೆ ಮೂಲದ ಪುಟ್ಟಲಕ್ಷ್ಮಮ್ಮ ಎಂಬುವವರ ಪುತ್ರಿಯಾಗಿ ಜನಿಸಿದವರು ನಾಗರತ್ನಮ್ಮ. ಅವರ ಕುರಿತಂತೆ ತಮಿಳುನಾಡಿನ ತಿರುವಯ್ಯಾರಿನಲ್ಲಿ ನಾದಬ್ರಹ್ಮ ತ್ಯಾಗರಾಜರಿಗೆ ಕಟ್ಟಿಸಿದ ಬೃಂದಾವನದ ಪ್ರಾಂಗಣದಲ್ಲಿರುವ ಸ್ಮರಣ ಫಲಕದಲ್ಲಿ ಈ ಬರಹವಿದೆ:

This Shrine and the Ashram are the offerings to Sri Thyagaraja Swamigal, the great saint and musician by his humble devotee Vidyasundari BANGALORE NAGARATNAM daughter of Puttalakshmamma of Mysore (completion of the Bulking Nov. 1938).

ಬೆಂಗಳೂರ್ ನಾಗರತ್ನಮ್ಮಾಳ್ ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದ್ದ ನಾಗರತ್ನಮ್ಮನವರು ಅಂದಿನ ಮದ್ರಾಸ್ ನಗರದ ಜಾರ್ಜ್‌ಟೌನ್ ಪ್ರದೇಶದಲ್ಲಿ 'ಮ್ಯಾನ್ಶನ್ ಹೌಸ್' ಎಂದು ಕರೆಯಲಾಗುತ್ತಿದ್ದ ಎಂಟು ಕೊರಡಿಯುಳ್ಳ ಬೃಹತ್ ಬಂಗಲೆಯೊಂದನ್ನು ಕಟ್ಟಿಕೊಂಡು ಬದುಕಿದವರು. 1920ರ ದಶಕದಲ್ಲಿ ದಕ್ಷಿಣ



ಭಾರತದಲ್ಲಿ ಪ್ರಥಮವಾಗಿ ಬ್ರಿಟಿಷ್ ಸರ್ಕಾರಕ್ಕೆ ವರಮಾನ ತೆರಿಗೆಯನ್ನು ಪಾವತಿಸಿದ ಐಕ್ಯೈಕ ಸಂಗೀತ ಕಲಾವಿದೆ ಎಂಬ ಖ್ಯಾತಿ ಪಡೆದವರು. 1905–1931ರ ನಡುವಿನ ಅವಧಿಯಲ್ಲಿ ದಕ್ಷಿಣ ಭಾರತದ ನಗರಗಳು ಮತ್ತು ಪಟ್ಟಣಗಳಲ್ಲಿ 1235ಕ್ಕೂ ಹೆಚ್ಚು ಸಂಗೀತ ಕಛೇರಿಗಳನ್ನು ನೀಡಿ ದಾಖಲೆ ಸ್ಥಾಪಿಸಿದ್ದರು, ನಂತರ ತಮ್ಮ ಇಡೀ ಸಂಪಾದನೆಯನ್ನು ಕರ್ನಾಟಕ ಸಂಗೀತದ ಪ್ರಸಿದ್ಧ ವಾಗ್ಗೇಯಕಾರ ತ್ಯಾಗರಾಜರ ಸಮಾಧಿಯ ಅಭಿವೃದ್ಧಿ ಮತ್ತು ಸಂಗೀತ ಆರಾಧನೆಗೆ ಧಾರೆಯೆರೆದವರು. ಇವು ಇತಿಹಾಸದ ಕೆಲವು ಪುಟಗಳು, ನಾಗರತ್ನಮ್ಮ ಕನ್ನಡದ ನಟುವರ ಹೆಣ್ಣುಮಗಳು ಎನ್ನುವ ಕಾರಣಕ್ಕೆ ಕಣ್ಮರೆಯಾಗಿರುವ ಇವುಗಳ ಹಿಂದಿನ ಮತ್ತು ಮುಂದಿನ ಪುಟಗಳನ್ನು ಈ ಪುಸ್ತಕ ಅನಾವರಣ ಮಾಡಿದೆ.

ಕನ್ನಡದ ಬರಹಗಳಲ್ಲಿ ಅವರನ್ನು ಮೊದಲಿಗೆ ಸ್ಮರಿಸಿಕೊಂಡಿರುವವರು ಮೈಸೂರು ವಾಸುದೇವಾಚಾರ್ಯರು ಮತ್ತು ಡಿ.ವಿ. ಗುಂಡಪ್ಪನವರು, ನಾಗರತ್ನಮ್ಮನವರ ಬದುಕಿನಲ್ಲಿ ಮೂರು ಪ್ರಮುಖ ಘಟ್ಟಗಳಿವೆ. ಇವರು ಕರ್ನಾಟಕದಲ್ಲಿ ಕಲಾವಂತಲು, ಪಾತರದವರು ನಾಯಕಸಾನಿ ಮುಂತಾದ ಹೆಸರುಗಳಲ್ಲಿ, ತಮಿಳುನಾಡಿನಲ್ಲಿ ನಟ್ಟುವನಾರ್ ಅಥವಾ ನಟುವ ಎಂದು ಗುರುತಿಸುವ ಸಮೂಹದಿಂದ ಬಂದವರು. (ಎಂ.ಎಸ್. ಸುಬ್ಬುಲಕ್ಷ್ಮಿ ಮತ್ತು ಎಂ.ಎಲ್. ವಸಂತಕುಮಾರಿ ಅವರೂ ಇದೇ ಮೂಲದವರು). 'ನಿನ್ನ ಮಗಳು ಮೈಸೂರಿನ ರಸ್ತೆಯಲ್ಲಿ ಸಗಣಿ ಬಾಚಲು ಮಾತ್ರ ಅರ್ಹಳು' ಎಂದು ಜಾತಿ ಕಾರಣಕ್ಕೆ ಗಿರಿಭಟ್ಟರ ತಮ್ಮಯ್ಯ ಶಾಸ್ತ್ರಿ ಎಂಬ ಸಂಗೀತಗಾರರಿಂದ ಹಂಗಿಸಿಕೊಂಡ ಪುಟ್ಟಲಕ್ಷ್ಮಮ್ಮ ತನ್ನ ಮಗಳನ್ನು ಅದ್ಭುತ ಸಂಗೀತ ನೃತ್ಯ ಕಲಾವಿದೆಯನ್ನಾಗಿಸಬೇಕೆಂದು ಹಂಬಲಿಸಿ ಅದಕ್ಕೆ ತನ್ನೆಲ್ಲ ಹಿತ ಪರಗಳನ್ನು ಒತ್ತೆಯಿಟ್ಟು ದುಡಿದರು. ಆದರೆ ಮಗಳು ಕೇವಲ ಹದಿಮೂರು ವರ್ಷದವಳಾಗಿದ್ದಾಗಲೇ ನಿಧನ ಹೊಂದಿದರು.

ಸೋದರ ಮಾನ ವೆಂಕಟಶಾಮಪ್ಪ ಮತ್ತು ಗುರುಗಳಾದ ಮುನಿಶಾಮಪ್ಪನಪರ ಆಶ್ರಯದಲ್ಲಿ ಬೆಳೆದು ಅಪ್ರತಿಮ ಸಂಗೀತಗಾರಳಾಗಿ ರೂಪುಗೊಂಡ ನಾಗರತ್ನಮ್ಮ 1893ರಲ್ಲಿ ತಾಯಿ ನಿಧನರಾದ ಎರಡು ವರ್ಷಗಳ ಅವಧಿಯಲ್ಲಿಯೇ ಮೈಸೂರು ಅರಮನೆಯಲ್ಲಿ ಪಾಡುಗಾರಿಕೆ ನಡೆಸಿಕೊಟ್ಟು ಗಿರಿಭಟ್ಟರ ತಮ್ಮಯ್ಯನವರೂ ಸೇರಿದಂತೆ ಅನೇಕ ವಿದ್ವಾಂಸರೂ, ಮೈಸೂರು ದೊರೆ ಹತ್ತನೆಯ ಚಾಮರಾಜ ಒಡೆಯರ್ ಅವರಿಂದ ಸೈ ಅನ್ನಿಸಿಕೊಂಡರು. ಅದೇ ಕಾಲಮಾನದಲ್ಲಿ ಅನೇಕ ಪ್ರಗತಿಪರ ಯೋಚನೆಗಳು ಸಾಕಾರವಾಗಲು ಕಾರಣವಾದ ಮೈಸೂರು ಸಂಸ್ಥಾನವು ದೇವಾಲಯಗಳಲ್ಲಿದ್ದ ದೇವದಾಸಿ ಪದ್ಧತಿಯ ಮೇಲೆ ನಿಷೇಧ ಹೇರಿತು. ಇದರಿಂದ ಕಲಾವಿದರಿಗೆ ತೊಂದರೆಯಾಗದಿರಲು ಅವರ ಕಲಾಪ್ರದರ್ಶನಕ್ಕೆ ಅರಮನೆಯು ಅನೇಕ ಅವಕಾಶಗಳನ್ನು ನೀಡಿ ಪ್ರೋತ್ಸಾಹಿಸಿತು. ಆದರೆ ಅನೇಕ ಪ್ರಗತಿಪರರು ಸಕಾರಣವಾಗಿ ಸರ್ಕಾರದ ಖಾನೆ ಸಂಗೀತ ಇತ್ಯಾದಿ ಕಲೆಗಳಿಗಾಗಿ ಮಿತಿಮೀರಿ ಬಳಕೆಯಾಗುತ್ತಿರುವುದರ ವಿರುದ್ಧ ದನಿ ತೆಗೆದುದರಿಂದ ಮೈಸೂರು ಸರ್ಕಾರವು ಆ ಅಭಿಪ್ರಾಯಗಳನ್ನು ಗೌರವಿಸಿ ಕಾರ್ಯಕ್ರಮಗಳನ್ನು ಮಿತಿಗೊಳಿಸಿತು. ಇದರಿಂದಾಗಿ ಕೆಲಮಟ್ಟದ ತೊಂದರೆಗೊಳಗಾದ ಬೆಂಗಳೂರು ನಾಗರತ್ನಮ್ಮನವರನ್ನು ಕೈಹಿಡಿದವರು ಅಂದಿನ ಹೈಕೋರ್ಟ್ ಜಸ್ಟಿಸ್ ಆಗಿದ್ದ ನರಹರಿರಾವ್ ಅವರು. ದಿನವೂ ಕೋರ್ಟ್ ಮುಗಿದ ನಂತರ ನರಹರಿರಾಯರು ನಗರ್ತರ ಪೇಟೆಯಲ್ಲಿದ್ದ ನಾಗರತ್ನಮ್ಮನವರ ಮನೆಗೆ ಬಂದು ಸಂಗೀತ ಆಲಿಸಿ ಹೋಗುವುದು ಮತ್ತು ಅವರ ಸಾರೋಟು ಮತ್ತು ದಂಡಧಾರಿ ಸೇವಕ ದೇವದಾಸಿಯೊಬ್ಬರ ಮನೆಯ ಮುಂದೆ ನಿಲ್ಲುವುದು ಕೆಲವರಿಗೆ ಕಿಸಿರುಗಣ್ಣಾಗಿ, ಅಂದಿನ ದಿವಾನ್ ಶೇಷಾದ್ರಿ ಅಯ್ಯರ್‌ರವರೆಗೆ ದೂರು ಹೋಯಿತು. ಇದನ್ನು ತುಂಬ ಸೂಕ್ಷ್ಮವಾಗಿ ನಿಭಾಯಿಸಿದ ದಿವಾನರು ಇನ್ನುಮುಂದೆ ನಾಗರತ್ನಮ್ಮನವರ ಮನೆಯ ಮುಂದೆ ದಂಡಧಾರಿ ನಿಲ್ಲುವುದು ಬೇಡ ಎಂದು ತೀರ್ಮಾನಿಸಿದರು! ಇದನ್ನು ಡಿ.ವಿ.ಜಿ.ಯವರು ನಿರ್ಮಲವಾದ ಮನಸ್ಸಿನಿಂದ ಸ್ಮರಿಸಿಕೊಳ್ಳುತ್ತಾರೆ. ನಂತರ ನರಹರಿರಾಯರು ನಾಗರತ್ನಮ್ಮನವರಿಗೆಂದು ಹನುಮಂತನಗರದ ಮೌಂಟ್ ಜಾಯ್ ಗುಡ್ಡದಲ್ಲಿ ಬಂಗಲೆಯೊಂದನ್ನು ಕಟ್ಟಿಸಿಕೊಟ್ಟರು.

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುತ್ತದೆ)**



**ಯಾರೇ ನೀನು ಚೆಲುವೆ?....**

# ಸತತ ಎರಡು ಬಾರಿ ಬೆಂಗಳೂರು ಆರ್‌ಸಿಬಿ ತಂಡಕ್ಕೆ ಐಪಿಎಲ್ ಚಾಂಪಿಯನ್ ಪಟ್ಟ



ಸುಮಾರು 1.3 ಲಕ್ಷ ಕ್ರೀಡಾಭಿಮಾನಿಗಳಿಗೆ ಅವಕಾಶ ಸಾಮರ್ಥ್ಯದ ಅಹ್ಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಎಲ್ಲಿ ನೋಡಿದರೂ, ವಿರಾಟ್ ಕೊಹ್ಲಿಯ ಜರ್ಸಿ ನಂಬರ್ 18 ತೊಟ್ಟ ಅಭಿಮಾನಿಗಳೇ ಕಿಕ್ಕಿರಿದು ತುಂಬಿದ್ದರು. ಇತ್ತೀಚಿನ ಭಾರತೀಯ ಕ್ರಿಕೆಟ್ ಯುಗದಲ್ಲಿ ಕಂಡುಕೇಳರಿಯದ ಅಭಿಮಾನಿಗಳನ್ನು ಹೊಂದಿರುವ ವಿರಾಟ್ ಕೊಹ್ಲಿ ಅವರ ಆಟ ನೋಡಲು ಅಪಾರ ಸಂಖ್ಯೆಯ ಕ್ರೀಡಾಭಿಮಾನಿಗಳು ಕ್ರೀಡಾಂಗಣಕ್ಕೆ ನುಗ್ಗುತ್ತಿದ್ದರು.

ಅತೀ ಕುತೂಹಲ ಮೂಡಿಸಿದ ಫೈನಲ್ ಪಂದ್ಯಕ್ಕೆ 52 ಮಿಲಿಯನ್ ಕ್ರಿಕೆಟ್ ಕ್ರೀಡಾಭಿಮಾನಿಗಳು ಭಾನುವಾರದ ಸಂಜೆ 7 ಘಂಟೆಗೆ ಹೊನಲು ಬೆಳಕಿನ ಪಂದ್ಯಕ್ಕೆ ಟಿವಿ ಮುಂದೆ ಕಾತರದಿಂದ ಕಾಯುತ್ತಿದ್ದರು. ಟಾಸ್ ಗೆದ್ದ ಆರ್‌ಸಿಬಿ ತಂಡದ ನಾಯಕ ಪಾಟಿದಾರ್ ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡರು. ಆದರೆ ಗುಜರಾತ್ ಟೈಟನ್ಸ್ ಅಗ್ರ ಬ್ಯಾಟಿಂಗ್ ನಿರೀಕ್ಷಿತ ಪ್ರದರ್ಶನ ನೀಡಲು ವಿಫಲವಾಯಿತು. ಆರಂಭಿಕ ಬ್ಯಾಟರ್‌ಗಳನ್ನು ಬೇಗ ಬೇಗನೇ ವಿಕೆಟ್ ಕಳೆದುಕೊಂಡ ಆರಂಭಿಕ ಜೋಡಿ ಸಾಯಿ ಸುದರ್ಶನ್ ಮತ್ತು ಗಿಲ್ ಸ್ಥಿರ ಆಟ ಪ್ರದರ್ಶಿಸಿದರೆ ಸ್ಕೋರ್ 26 ಆಗಿದ್ದಾಗ ಫೆವಲಿನ್‌ಗೆ ಹಿಂತಿರುಗಿದರು. ಪರಿಣಾಮ ತಂಡ ಒತ್ತಡಕ್ಕೆ ಸಿಲುಕಿತು. ಮಧ್ಯಮ ಕ್ರಮಾಂಕದಲ್ಲಿ ಆಡಲು ಬಂದ ವಾಷಿಂಗ್ಟನ್ ಸುಂದರ್ ಅಜೇಯ ಅರ್ಧಶತಕದ ನೆರವಿನಿಂದ ಅಂತಿಮ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಲು ಸಾಧ್ಯವಾಯಿತು. ಆರ್‌ಸಿಬಿ ತಂಡದ ಪರ ಬೋಲರ್‌ಗಳಾದ ರಸಿಖ್ ಸಲಾಂ 3 ವಿಕೆಟ್ ಪಡೆದು ಮಿಂಚಿದರೆ, ಭುವನೇಶ್ವರ್ ಕುಮಾರ್ ಜೋಶ್ ಹೇಜಲ್‌ವುಡ್ ತಲಾ 2 ವಿಕೆಟ್ ಕಬಳಿಸಿ ಗುಜರಾತ್ ಬ್ಯಾಟಿಂಗ್‌ಗೆ ಕಡಿವಾಣ ಹಾಕಿದರು.

ಗುಜರಾತ್‌ನ ಟೈಟಾನ್ಸ್‌ನ 156 ರನ್‌ಗಳ ಗುರಿ ಬೆನ್ನತ್ತಿದ ಆರ್‌ಸಿಬಿ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರಾರಂಭಿಸಿ ವೆಂಕಟೇಶ್ ಅಯ್ಯರ್ ಅವರ ವೇಗದ 32 ರನ್‌ಗಳು ತಂಡಕ್ಕೆ ಉತ್ತಮ ಅಡಿಪಾಯ ಒದಗಿಸಿತು. ನಂತರ ವಿರಾಟ್ ಕೊಹ್ಲಿ ಮತ್ತೊಮ್ಮೆ ತಮ್ಮ ಅನುಭವದ ಬ್ಯಾಂಟಿಂಗ್ ಮೂಲಕ ಕೇವಲ 25 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿ ಪಂದ್ಯದ ದಿಕ್ಕನ್ನೇ ಬದಲಾಯಿಸಿ 9 ಬೌಂಡರಿ ಹಾಗೂ 3 ಸಿಕ್ಸರ್‌ಗಳ ನೆರವಿನಿಂದ 75 ರನ್ ಭಾರಿಸುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು.

18ನೇ ಓವರ್‌ನಲ್ಲೇ ಗುರಿ ತಲುಪಿದ ಆರ್‌ಸಿಬಿ 5 ವಿಕೆಟ್‌ಗಳ ಜಯ ದಾಖಲಿಸಿದ್ದು, ಪಂದ್ಯಶ್ರೇಷ್ಠ ಪ್ರಶಸ್ತಿ ವಿರಾಟ್ ಕೊಹ್ಲಿ ಕೊರಳಿಗೆ ಬಿತ್ತು. ಈ ಐಪಿಎಲ್ 2026ರ ಫೈನಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಗುಜರಾತ್ ಟೈಟನ್ಸ್ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ಸತತ ಎರಡನೇ ಬಾರಿಗೆ ಐಪಿಎಲ್ ಕಿರೀಟವನ್ನು ತನ್ನದಾಗಿಸಿಕೊಂಡಿತು. ಪ್ರಧಾನಿ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಈ ಹೈವೋಲ್ಟೇಜ್ ಪಂದ್ಯದಲ್ಲಿ ಆರ್‌ಸಿಬಿ ಎಲ್ಲಾ ವಿಭಾಗಗಳಲ್ಲೂ ಮೇಲುಗೈ ಸಾಧಿಸಿ ತುರ್ತು ಕ್ರಿಕೆಟ್ ಐಪಿಎಲ್‌ನಲ್ಲಿ ತನ್ನ ಪಾರಮ್ಯವನ್ನು ಕಾಯ್ದಿರಿಸಿಕೊಂಡಿತು. ಈ ಜಯದೊಂದಿಗೆ ಆರ್‌ಸಿಬಿ ತನ್ನ ಐಪಿಎಲ್ ಪ್ರಾಬಲ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದಂತಾಗಿ ಅಭಿಮಾನಿಗಳ ಸಂಭ್ರಮಕ್ಕೆ ಎಲ್ಲೆ ಇರದಂತಾಗಿ ಇಡೀ ರಾತ್ರಿ ದೇಶ ಮತ್ತು ಕರ್ನಾಟಕದ ಎಲ್ಲೆಲ್ಲೂ ಸಂಭ್ರಮಾಚರಣೆಯೊಂದಿಗೆ ಅಭಿಮಾನಿಗಳು ಕುಣಿದಾಡಿದರು. ಸತತ ಎರಡನೇ ಬಾರಿಗೆ ಟ್ರೋಫಿ ಗೆದ್ದಿರುವುದು ತಂಡದ ಇತಿಹಾಸದಲ್ಲಿ ಮತ್ತೊಂದು ಸುವರ್ಣ ಅಧ್ಯಾಯವಾಗಿ ದಾಖಲಿಸಿದಂತಾಗಿದೆ. ಈ ದಾಖಲೆ ಇಲ್ಲಿಯವರೆಗೆ ಚೆನ್ನೈ ಮತ್ತು ಮುಂಬೈ ತಂಡಗಳು ಮಾತ್ರ ಸಾಧಿಸಿದ್ದರು.

# ಐಪಿಎಲ್‌ನಲ್ಲಿ 600 ರನ್ ಗಳಿಸಿ ಇತಿಹಾಸ ನಿರ್ಮಿಸಿದ ವೈಭವ್




ಈ ಬಾರಿಯ ಐಪಿಎಲ್‌ನಲ್ಲಿ ವೈಭವ್ ಸೂರ್ಯವಂಶಿ ಐಪಿಎಲ್ ಇತಿಹಾಸದಲ್ಲಿ 600 ರನ್ ಗಳಿಸಿದ ಅತ್ಯಂತ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಒಂದು ಋತುವಿನಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ದಾಖಲೆಯುನ್ನೂ ಅವರು ಹೊಂದಿದ್ದಾರೆ. ಈಗ ಅವರ ಹೆಸರಿಗೆ 65 ಸಿಕ್ಸರ್‌ಗಳಿವೆ.

ವೈಭವ್ ಕೇವಲ 16 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಐಪಿಎಲ್‌ನಲ್ಲಿ ಇದು ಐದನೇ ಬಾರಿಗೆ 20 ಅಥವಾ ಅದಕ್ಕಿಂತ ಕಡಿಮೆ ಎಸೆತಗಳಲ್ಲಿ ಅರ್ಧ ಶತಕ ಗಳಿಸಿದ್ದಾರೆ.

15 ವರ್ಷದ ವೈಭವ್ 97 ರನ್ ಗಳಿಸಿದರು. ಈ ಇನ್ನಿಂಗ್ಸ್ ನಲ್ಲಿ, ಅವರು ಈ ಋತುವಿನಲ್ಲಿ ತಮ್ಮ 600 ರನ್‌ಗಳನ್ನು ಪೂರ್ಣಗೊಳಿಸಿದರು. ಐಪಿಎಲ್‌ನ ಒಂದೇ ಋತುವಿನಲ್ಲಿ 600 ಅಥವಾ ಅದಕ್ಕಿಂತ ಹೆಚ್ಚು ರನ್ ಗಳಿಸಿದ ಅತ್ಯಂತ ಕಿರಿಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಇದಕ್ಕೂ ಮೊದಲು, ಈ ದಾಖಲೆ ರಿಷಭ್ ಪಂತ್ ಹೆಸರಿನಲ್ಲಿತ್ತು, ಅವರು 2018ರಲ್ಲಿ 20ನೇ ವಯಸ್ಸಿನಲ್ಲಿ ಈ ಸಾಧನೆ ಮಾಡಿದ್ದಾರೆ.

ವೈಭವ್ 16 ಎಸೆತಗಳಲ್ಲಿ ಅರ್ಧ ಶತಕ ಗಳಿಸಿದ್ದು, ಐಪಿಎಲ್‌ನಲ್ಲಿ 20ಕ್ಕಿಂತ ಕಡಿಮೆ ಎಸೆತಗಳಲ್ಲಿ ಅರ್ಧ ಶತಕ ಗಳಿಸಿದ್ದು ಇದು ಐದನೇ ಬಾರಿಯಾಗಿದೆ. ಅವರು ನಿಕೋಲಸ್ ಪೂರನ್ ಅವರೊಂದಿಗೆ ಜಂಟಿಯಾಗಿ ಎರಡನೇ ಸ್ಥಾನದಲ್ಲಿದ್ದಾರೆ. ಮೊದಲ ಸ್ಥಾನದಲ್ಲಿ ಅಭಿಷೇಕ್ ಶರ್ಮಾ ಇದ್ದಾರೆ, ಅವರು ಈ ಸಾಧನೆಯನ್ನು 6 ಬಾರಿ ಸಾಧಿಸಿದ್ದಾರೆ.

ಒಂದು ಋತುವಿನಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಕ್ರಿಸ್ ಗೇಲ್ ಅವರ ದಾಖಲೆಯನ್ನು ವೈಭವ್ ಮುರಿದಿದ್ದಾರೆ. ಅವರು ತಮ್ಮ 12–6 ಇನ್ನಿಂಗ್ಸ್‌ಗಳಲ್ಲಿ ಏಳನೇ ಸಿಕ್ಸರ್ ಬಾರಿಸಿದರು, ಗೇಲ್ ಅವರ 59 ಸಿಕ್ಸರ್‌ಗಳ ದಾಖಲೆಯನ್ನು ಮುರಿದರು. 2012 ರಲ್ಲಿ ಬೆಂಗಳೂರು ಪರ ಆಡುವಾಗ ಗೇಲ್ 59 ಸಿಕ್ಸರ್‌ಗಳನ್ನು ಬಾರಿಸಿದ್ದರು.

ವೈಭವ್ 16 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಈ ಇನ್ನಿಂಗ್ಸ್‌ನಲ್ಲಿ, ಅವರು ಐಪಿಎಲ್ ಪ್ಲೇಆಫ್‌ನಲ್ಲಿ ಅತ್ಯಂತ ವೇಗದ ಅರ್ಧಶತಕದ ದಾಖಲೆಯನ್ನು ಸರಿಗಟ್ಟಿದರು. ಇದಕ್ಕೂ ಮೊದಲು, ಈ ದಾಖಲೆಯನ್ನು ಚೆನ್ನೈ ಸೂಪರ್ ಕಿಂಗ್ಸ್‌ನ ಸುರೇಶ್ ರೈನಾ ಹೊಂದಿದ್ದರು, ಅವರು 2014ರಲ್ಲಿ ವಾಂಖೆಡೆಯಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 16 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದರು.

ಮುಲ್ಲನ್‌ಪುರದಲ್ಲಿ ನಡೆದ ಪವರ್‌ಪ್ಲೇನಲ್ಲಿ ವೈಭವ್ ತಮ್ಮ ಐದನೇ 50+ ರನ್ ಗಳಿಸಿದರು. ಐಪಿಎಲ್‌ನಲ್ಲಿ ಪವರ್‌ಪ್ಲೇನಲ್ಲಿ ಐವತ್ತು ಅಥವಾ ಅದಕ್ಕಿಂತ ಹೆಚ್ಚು ರನ್ ಗಳಿಸಿದ ಎರಡನೇ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು, 6 ಬಾರಿ ಪವರ್‌ಪ್ಲೇನಲ್ಲಿ 50+ ರನ್ ಗಳಿಸಿದ್ದ ಡೇವಿಡ್ ವಾರ್ನರ್ ಮಾತ್ರ ನಂತರ. ಪವರ್‌ಪ್ಲೇ ಸಮಯದಲ್ಲಿ ವೈಭವ್ 8 ಸಿಕ್ಸರ್‌ಗಳನ್ನು ಬಾರಿಸಿದರು. ಇದರೊಂದಿಗೆ, ಅವರು ಐಪಿಎಲ್ ಇನ್ನಿಂಗ್ಸ್‌ನ ಮೊದಲ 6 ಓವರ್‌ಗಳಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಅವರು ತಲಾ 7 ಸಿಕ್ಸರ್‌ಗಳನ್ನು ಹೊಂದಿರುವ ಸನತ್ ಜಯಸೂರ್ಯ, ಜೋಸ್ ಬಟ್ಲರ್ ಮತ್ತು ಜಾನಿ ಬೈರ್‌ಸ್ಟೋವ್ ಅವರನ್ನು ಹಿಂದಿಕ್ಕಿದ್ದಾರೆ. ಈ ಋತುವಿನ ಲೀಗ್ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧದ ಪವರ್‌ಪ್ಲೇಯಲ್ಲಿ ವೈಭವ್ 7 ಸಿಕ್ಸರ್‌ಗಳನ್ನು ಬಾರಿಸಿದ್ದರು.ಹೈದರಾಬಾದ್ ವಿರುದ್ಧದ ಪವರ್‌ಪ್ಲೇನಲ್ಲಿ ವೈಭವ್ 23 ಎಸೆತಗಳಲ್ಲಿ 71 ರನ್ ಗಳಿಸಿದರು. ಐಪಿಎಲ್‌ನ ಒಂದೇ ಋತುವಿನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು, 490 ರನ್ ಗಳಿಸಿ ದರು. ಈ ದಾಖಲೆಯನ್ನು 2016 ರಲ್ಲಿ ಹೈದರಾಬಾದ್ ಪರಪವರ್ ಪ್ಲೇನಲ್ಲಿ 467 ರನ್ ಗಳಿಸಿದ ಡೇವಿಡ್ ವಾರ್ನರ್ ಹೊಂದಿದ್ದರು.

ಹೈದರಾಬಾದ್ ವಿರುದ್ಧದ ತಮ್ಮ ಇನ್ನಿಂಗ್ಸ್‌ನಲ್ಲಿ ವೈಭವ್ 12 ಸಿಕ್ಸರ್‌ಗಳನ್ನು ಬಾರಿಸಿದರು. ಒಂದೇ ಇನ್ನಿಂಗ್ಸ್‌ನಲ್ಲಿ 10 ಅಥವಾ ಅದಕ್ಕಿಂತ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ್ದು ಇದು ಅವರ ನಾಲ್ಕನೇ ಬಾರಿ. ಇದರಲ್ಲಿ, ಅವರು 4 ಬಾರಿ ಈ ಸಾಧನೆ ಮಾಡಿದ ಕ್ರಿಸ್ ಗೇಲ್ ಅವರನ್ನು ಸರಿಗಟ್ಟಿದ್ದಾರೆ.

ಈ 12 ಸಿಕ್ಸರ್‌ಗಳ ಇನ್ನಿಂಗ್ಸ್‌ನೊಂದಿಗೆ, ವೈಭವ್ ಐಪಿಎಲ್ ಪ್ಲೇಆಫ್‌ನಲ್ಲಿ ಇನ್ನಿಂಗ್ಸ್‌ನಲ್ಲಿ ಅತಿ ಹೆಚ್ಚು ಸಿಕ್ಸರ್‌ಗಳನ್ನು ಬಾರಿಸಿದ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದಕ್ಕೂ ಮೊದಲು, ಈ ದಾಖಲೆಯು 2023ರ ಅಹಮದಾಬಾದ್ ಮೈದಾನ ದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 10 ಸಿಕ್ಸರ್‌ಗಳನ್ನು ಬಾರಿಸಿದ್ದ ಶುಭಮನ್ ಗಿಲ್ ಹೆಸರಿನಲ್ಲಿತ್ತು.

## ತೂಬಗೆರೆ ಕೆಂಪುತೊಳೆ ಮಾರುಕಟ್ಟೆಗೆ ಲಗ್ಗೆ

# ರಸ್ತೆಬದಿ ಹಲಸಿನ ಭರ್ಜರಿ ಮಾರಾಟ: ಶೀಘ್ರದಲ್ಲೇ ತೋಟಗಾರಿಕೆ ಇಲಾಖೆಯಿಂದ ಮೇಳ









**ಹ**ಲಸಿನ ಹಣ್ಣಿಗೆ ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿರುವ ತೂಬಗೆರೆ. ಹಲಸು ಮಾರುಕಟ್ಟೆಗೆ ಆಗಮಿಸುತ್ತಿದ್ದು, ಹಲಸು ಖರೀದಿಗೆ ಜನ ಮುಗಿಬೀಳುತ್ತಿರುವ ದೃಶ್ಯ ಕಂಡುಬರುತ್ತಿದೆ.

ತನ್ನದೇ ರುಚಿ ಹಾಗೂ ಘಮದಿಂದ ಗ್ರಾಹಕರನ್ನು ಸೆಳೆಯುವ ತೂಬಗೆರೆಯ ಕೆಂಪುತೊಳೆ ಹಲಸಿಗೆ ಎಲ್ಲ ಕಡೆಯೂ ಬೇಡಿಕೆ ಇದೆ. ದೊಡ್ಡಬಳ್ಳಾಪುರ ನಗರದ ಬೀದಿ ಬದಿಗಳಲ್ಲಿ ರಾಶಿಗಟ್ಟಲೆ ಹಲಸಿನ ಮಾರಾಟ ನಡೆಯುತ್ತಿದೆ. ಇದರ ನಡುವೆ ಜಿಲ್ಲಾ ತೋಟ ಗಾರಿಕೆ ಇಲಾಖೆಯು ಮೇನಲ್ಲಿ ಮಾವು ಹಾಗೂ ಹಲಸಿನ ಮೇಳ ಆಯೋಜಿಸಲು ತಯಾರಿ ನಡೆಸಿದ್ದು ತೂಬಗೆರೆ ಹಲಸಿನ ಘಮ ಸವಿಯಲು ಗ್ರಾಹಕರಿಗೆ ಅವಕಾಶ ಸಿಗಲಿದೆ.

ದೊಡ್ಡಬಳ್ಳಾಪುರ ನಗರದಿಂದ ಸುಮಾರು 12 ಕಿ.ಮೀ ಸಾಗಿದರೆ ಘಾಟಿ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಸಾಗುವ ಮಾರ್ಗಮಧ್ಯೆ ತೂಬಗೆರೆ ಎದುರುಗೊಳ್ಳುತ್ತದೆ. ಬೇಸಿಗೆಯಲ್ಲಿ ತೂಬಗೆರೆ ಹಲಸಿನ ಫಸಲು ಮಾರುಕಟ್ಟೆಗೆ ರವಾನೆಯಾಗಲು ಸಿದ್ಧಗೊಳ್ಳುತ್ತವೆ. ಇಲ್ಲಿನ ಕೆಂಪುತೊಳೆಯ ಹಲಸಿಗೆ ಜನ ಬಾಯಿ ಚಪ್ಪರಿಸುತ್ತಾರೆ. ನೆರೆಯ ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಭಾಗದ ಜನ ತೂಬಗೆರೆ ಹಲಸು ಕೊಳ್ಳಲು ದೊಡ್ಡ ಬಳ್ಳಾಪುರಕ್ಕೆ ಆಗಮಿಸುವುದು ಕಂಡುಬರುತ್ತದೆ. ಅಲ್ಲದೇ ಮತ್ತು ಮೈಸೂರು ಭಾಗಗಳಲ್ಲೂ ಡಿಮಾಂಡ್ ಇದೆ. ಇತ್ತೀಚಿನ ವರ್ಷಗಳಲ್ಲಿ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ವಿದೇಶಗಳಿಗೂ ತೂಬಗೆರೆ ಹಲಸು ರಫ್ತಾಗುತ್ತಿರುವುದು ಇದರ ವಿಶೇಷತೆಗೆ ಸಾಕ್ಷಿಯಾಗಿದೆ. ಹಲಸಿನ ಹಣ್ಣಿನಲ್ಲಿ ಔಷಧೀಯ ಅಂಶಗಳನ್ನು ಒಳಗೊಂಡಿದೆ. ಅಧಿಕ ಪ್ರಮಾಣದಲ್ಲಿ ವಿಟಮಿನ್‌ಗಳು, ಸೆರೊಟೆನಿನ್, ಬೀಟಾ ಕ್ಯಾರೋಟಿನ್, ಸೋಡಿಯಮ್, ಕ್ಯಾಲ್ಸಿಯಮ್, ಪೊಟಾಷಿಯಂ ಅಂಶಗಳು ಹಣ್ಣಿನಲ್ಲಿ ಅಡಕವಾಗಿರುತ್ತದೆ ಎನ್ನಲಾಗಿದೆ.

ತೂಬಗೆರೆಯಲ್ಲಿ ವಿಶೇಷ ಮರಗಳು: ತೂಬಗೆರೆ ಹೋಬಳಿಯಲ್ಲಿ ತೂಬಗೆರೆ ಗ್ರಾಮ ಸೇರಿ ಸುತ್ತ ಮುತ್ತಲಿನಲ್ಲಿ ಗ್ರಾಮಗಳಲ್ಲಿ ಈ ವಿಶೇಷ ಹಲಸಿನ ಮರಗಳಿವೆ. ಅದರಲ್ಲೂ 'ಕಾಚ್ಚಹಳ್ಳಿ ಗ್ರಾಮ'ದಲ್ಲಿನ ಕೆಂಪು ತೊಳೆಯ ಹಲಸಿನ ಹಣ್ಣು ಗಮನ ಸೆಳೆಯುತ್ತಿದೆ. ಮರದ ಬುಡದಿಂದಲೇ ಆರಂಭವಾಗಿ ಇಡೀ ಮರವನ್ನೇ ಅವರಿಸಿಕೊಂಡು ಬೆಳೆಯುವ ಹಲಸಿನ ಹಣ್ಣಿನ ಗೊಂಚಲನ್ನು ನೋಡುವುದೇ ಸೊಗಸು. ಇಲ್ಲಿನ ಮರಗಳಲ್ಲಿ ಹಳದಿ ಬಣ್ಣದ ತೊಳೆಯ ಹಲಸು, ಕೆಂಪು ಬಣ್ಣದ ಹಲಸು, ಹೆಬ್ಬಲಸು ಸೇರಿ ವಿಧದ ಬಣ್ಣ ರುಚಿಯ ಹಲಸಿನ ಹಣ್ಣುಗಳು ಕಂಡುಬರುವುದು ವಿಶೇಷ. ಚಂದ್ರಹಲಸು, ಬಿಳಿಹಲಸು, ನೀರುತೊಳೆ, ಬಿಳಿ, ಹಳದಿ ತೊಳೆಹಣ್ಣು ಹೀಗೆ ವಿವಿಧ ಹೆಸರುಗಳ ಹಣ್ಣುಗಳು ಕಂಡು ಬರುತ್ತಿವೆ.

ರಾಜ್ಯದಲ್ಲೇ ತೂಬಗೆರೆ ಹಲಸಿಗೆ ವಿಶೇಷ ಬೇಡಿಕೆ ಇದೆ. ಇಲ್ಲಿನ ತಳಿಯ ಹಲಸಿನ ಬಣ್ಣ ಹಾಗೂ ವಿಶೇಷ ರುಚಿ ಬೇರೆ ಕಡೆ ಕಾಣಲು ಸಾಧ್ಯವಿಲ್ಲ. ಪ್ರಸ್ತುತ ಹಲಸಿನ ಸುಗ್ಗಿಯಾಗಿದ್ದು, ಈ ಬಾರಿ ಉತ್ತಮ ಫಸಲು ಕಂಡುಬಂದಿದೆ. ಬೆಳೆಗಾರರೇ ಸೇರಿ ಮೇಳ ಆಯೋಜಿಸುತ್ತೇವೆ ಇದರೊಂದಿಗೆ ತೋಟಗಾರಿಕೆ ಇಲಾಖೆಯೂ ಮೇಳ ಆಯೋಜಿಸುವ ಭರವಸೆ ನೀಡಿರುವುದು ಸಂತಸ ತಂದಿದೆ.

ತೂಬಗೆರೆ ಹಲಸಿಗೆ ವಿಶೇಷತೆ ಇದೆ, ಸಾಮಾನ್ಯವಾಗಿ ರಾಜ್ಯದ ಎಲ್ಲ ಕಡೆಗಳಿಗೂ ಇಲ್ಲಿಂದ ಹಲಸು ಸರಬರಾಜು ಆಗುತ್ತದೆ. ಪ್ರತಿ ವರ್ಷ ಎಪ್ರಿಲ್‌ನಿಂದ ಜೂನ್‌ವರೆಗೆ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯುವ ಹಲಸು ಮತ್ತು ಮಾವಿನ ಮೇಳದಲ್ಲಿ ಈ ಭಾಗದ ಹಲಸು ಬೆಳೆಗಾರರು ಭಾಗವಹಿಸಿ ಹಣ್ಣುಗಳ ಮಾರಾಟ ಮಾಡುತ್ತಾರೆ. ತೂಬಗೆರೆ ಹಲಸು ಬೆಳೆಗಾರರ ಸಂಘದಿಂದ ಪ್ರತಿ ವರ್ಷ ಹಲಸಿನ ಮೇಳ ಆಯೋಜಿಸಲಾಗುತ್ತಿದ್ದು, ಗ್ರಾಹಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಇದರ ಜತೆಗೆ ಜಿಲ್ಲಾ ತೋಟಗಾರಿಕೆ ಇಲಾಖೆಯಿಂದ ದೇವನಹಳ್ಳಿ ಭಾಗದಲ್ಲಿ ಹಲಸಿನ ಮೇಳ ನಡೆಸುತ್ತಾ ಬಂದಿರುವುದರಿಂದ ಬೆಳೆಗಾರರು ಆರ್ಥಿಕವಾಗಿ ಲಾಭಗಳಿಸಲು ಕಾರಣವಾಗಿದೆ.

# ಶೀಘ್ರ ಪೆಟ್ರೋಲ್ ಬಂಕ್‌ಗಳಲ್ಲಿ ಎಥೆನಾಲ್ ಮಿಶ್ರಿತ ಇಂಧನ


**ಸೂ**ಪರ್ ಮಾರ್ಕೆಟ್‌ಗಳಲ್ಲಿ ನಮಗೆ ಬೇಕಾದ ವಸ್ತುಗಳನ್ನು ಆಯ್ದುಕೊಳ್ಳುವಂತೆ, ಇನ್ನು ಮುಂದೆ ದೇಶದ ಪೆಟ್ರೋಲ್ ಬಂಕ್‌ಗಳಲ್ಲೂ ಗ್ರಾಹಕರು ತಮ್ಮ ಕಾರು ಹಾಗೂ ದ್ವಿಚಕ್ರ ವಾಹನಗಳ ಇಂಜಿನ್ ಸಾಮರ್ಥ್ಯಕ್ಕೆ ಅನುಗುಣವಾಗಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಅನ್ನು ತಾವೇ ಆಯ್ಕೆ ಮಾಡಿಕೊಳ್ಳುವ ದಿನಗಳು ಹತ್ತಿರವಾಗಲಿವೆ.

ದೇಶದಲ್ಲಿ ಸದ್ಯ ಚಾಲ್ತಿಯಲ್ಲಿರುವ ಶೇ. 20ರಷ್ಟು (ಇ20) ಎಥೆನಾಲ್ ಮಿಶ್ರಿತ ಪೆಟ್ರೋಲ್ ಜೊತೆಗೆ, ಹೊಸದಾಗಿ ಇ22, ಇ25 ಮತ್ತು ಇ30 (ಅಂದರೆ ಕ್ರಮವಾಗಿ ಶೇ. 22, ಶೇ. 25 ಮತ್ತು ಶೇ. 30ರಷ್ಟು ಎಥೆನಾಲ್ ಮಿಶ್ರಣ) ಇಂಧನ ರೂಪಾಂತರಗಳನ್ನು ಪರಿಚಯಿಸಲು ಕೇಂದ್ರ ಸರ್ಕಾರ ಗಂಭೀರ ಚಿಂತನೆ ನಡೆಸಿದೆ. ಈ ಕುರಿತು ಸಾರ್ವಜನಿಕ ಮತ್ತು ಖಾಸಗಿ ವಲಯದ ತೈಲ ಕಂಪನಿಗಳಿಗೆ ಅಗತ್ಯ ಮೂಲಸೌಕರ್ಯ ಸಿದ್ಧಪಡಿಸಿಕೊಳ್ಳುವಂತೆ ಸರ್ಕಾರ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಗ್ರಾಹಕರು ಗೊಂದಲಕ್ಕೊಳಗಾಗದಂತೆ ಪ್ರತಿಯೊಂದು ಪೆಟ್ರೋಲ್ ಬಂಕ್‌ನ ಡಿಸ್ಪೆನ್ಸಿಂಗ್ ಪಂಪ್‌ಗಳ ಮೇಲೆ ಎಥೆನಾಲ್ ಮಿಶ್ರಣದ ಪ್ರಮಾಣವನ್ನು ಸ್ಪಷ್ಟವಾಗಿ ಪ್ರದರ್ಶಿಸಬೇಕಾಗುತ್ತದೆ. ಸದ್ಯ ಪೆಟ್ರೋಲ್ ಬಂಕ್‌ಗಳಲ್ಲಿ ಡೀಸೆಲ್, ಪ್ರೀಮಿಯಂ ಪೆಟ್ರೋಲ್ ಹಾಗೂ ಸಾಮಾನ್ಯ ಪೆಟ್ರೋಲ್‌ಗೆ ಪ್ರತ್ಯೇಕ ನಳಿಕೆಗಳು ಇರುವಂತೆ, ಈ ಹೊಸ ಇಂಧನಗಳಿಗೂ ಪ್ರತ್ಯೇಕ ವ್ಯವಸ್ಥೆ ಇರಲಿದೆ. ಮುಖ್ಯವಾಗಿ, ಎಥೆನಾಲ್ ಮಿಶ್ರಣದ ಪ್ರಮಾಣಕ್ಕೆ ಅನುಗುಣವಾಗಿ ಇಂಧನದ ದರಗಳಲ್ಲೂ ವ್ಯತ್ಯಾಸ ವಿರಲಿದೆ ಎನ್ನಲಾಗಿದೆ.

ಸರ್ಕಾರದ ಅಧಿಕೃತ ಅಂಕಿ-ಅಂಶಗಳ ಪ್ರಕಾರ, 2014ರ ನವೆಂಬರ್‌ನಿಂದ 2026ರ ಫೆಬ್ರವರಿ ಅವಧಿಯಲ್ಲಿ ಎಥೆನಾಲ್ ಮಿಶ್ರಣದ ಬಳಕೆಯಿಂದಾಗಿ ಭಾರತಕ್ಕೆ ಬರೋಬ್ಬರಿ 1.7 ಲಕ್ಷ ಕೋಟಿ ರೂಪಾಯಿ ವಿದೇಶಿ ವಿನಿಮಯ ಉಳಿತಾಯವಾಗಿದೆ. ಅಷ್ಟೇ ಅಲ್ಲದೆ, 87 ಮಿಲಿಯನ್ ಟನ್ ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲಾಗಿದ್ದು, ಇದು ಸುಮಾರು 35 ಕೋಟಿ ಮರಗಳನ್ನು ನೆಡುವುದಕ್ಕೆ ಸಮಾನವಾಗಿದೆ.

ಎಥೆನಾಲ್ ಅನ್ನು ಪ್ರಮುಖವಾಗಿ ಕಬ್ಬು ಮತ್ತು ಧಾನ್ಯಗಳಿಂದ ಉಪ-ಉತ್ಪನ್ನವಾಗಿ ತಯಾರಿಸಲಾಗುತ್ತದೆ. ಇದನ್ನು ಪೆಟ್ರೋಲ್ ಜೊತೆ ಮಿಶ್ರಣ ಮಾಡುವುದರಿಂದ ಪರಿಸರ ಮಾಲಿನ್ಯ ಕಡಿಮೆಯಾಗುವುದಲ್ಲದೆ, ಭಾರತವು ವಿದೇಶ



ಗಳಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಮೇಲಿನ ಅವಲಂಬನೆ ಗಣನೀಯವಾಗಿ ತಗ್ಗುತ್ತದೆ.

ದೇಶದಲ್ಲಿ ಸದ್ಯ 20 ಬಿಲಿಯನ್ ಲೀಟರ್ ಎಥೆನಾಲ್ ಉತ್ಪಾದನಾ ಸಾಮರ್ಥ್ಯವಿದ್ದು, ಪ್ರಸ್ತುತ ಬೇಡಿಕೆ ಕೇವಲ 11 ಬಿಲಿಯನ್ ಲೀಟರ್‌ಗಳಷ್ಟಿದೆ. ಹೀಗಾಗಿ ಹೆಚ್ಚುವರಿ ಎಥೆನಾಲ್ ಅನ್ನು ಬಳಸಿಕೊಳ್ಳಲು ಈ ಯೋಜನೆ ಸಹಕಾರಿಯಾಗಲಿದೆ. ಎಥೆನಾಲ್ ಪ್ರಮಾಣ ಹೆಚ್ಚಾದಂತೆ ಪೆಟ್ರೋಲ್ ದರ ಸಾಮಾನ್ಯ ಪೆಟ್ರೋಲ್‌ಗಿಂತ ಕೊಂಚ ಕಡಿಮೆ ಇರುವ ಸಾಧ್ಯತೆ ಇದೆ.

ಶೇ. 20ಕ್ಕಿಂತ ಹೆಚ್ಚಿನ ಎಥೆನಾಲ್ ಮಿಶ್ರಿತ ಇಂಧನ ಬಳಕೆಗೆ ವಾಹನಗಳ ಇಂಜಿನ್ ಸೂಕ್ತವಾಗಿದೆಯೇ ಎಂಬು ದನ್ನು ಗ್ರಾಹಕರು ಗಮನಿಸಬೇಕಾಗುತ್ತದೆ. ಇತ್ತೀಚೆಗಷ್ಟೇ ಸರ್ಕಾರ ಸಂಪೂರ್ಣ ಎಥೆನಾಲ್ ಚಾಲಿತ ವಾಹನಗಳಿಗೂ ಅನುಮತಿ ನೀಡಲು ಪ್ರಸ್ತಾಪಿಸಿದೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ಹಾಗೂ ಕಚ್ಚಾ ತೈಲದ ಬೆಲೆ ಏರಿಳಿತದ ನಡುವೆ, ಭಾರತದ ಇಂಧನ ಭದ್ರತೆಯನ್ನು ಗಟ್ಟಿಗೊಳಿಸಲು ಈ ಹೆಜ್ಜೆ ಅತ್ಯಂತ ಮಹತ್ವದ್ದಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

# ಮತದಾರರ ಹೆಸರು ಡಿಲಿಟ್: ಕೇಂದ್ರಕ್ಕೆ ಪಟ್ಟಿ ಸಲ್ಲಿಸಲು ಆಯೋಗಕ್ಕೆ ಸುಪ್ರೀಂಕೋರ್ಟ್ ಸೂಚನೆ



ಮತದಾನದ ಹಕ್ಕಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪೊಂದನ್ನು ನೀಡಿದೆ. 'ಸಂದೇಹಾಸ್ಪದ ಪೌರತ್ವ'ದ ಆಧಾರದ ಮೇಲೆ 2003ರ ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲಾದ ವ್ಯಕ್ತಿಗಳ ಪಟ್ಟಿಯನ್ನು ಮುಂದಿನ ನಾಲ್ಕು ವಾರಗಳ ಒಳಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸುವಂತೆ ಭಾರತೀಯ ಚುನಾವಣಾ ಆಯೋಗಕ್ಕೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ಈ ವ್ಯಕ್ತಿಗಳ ಪೌರತ್ವದ ಸ್ಥಿತಿಗತಿಯನ್ನು ಅಂತಿಮವಾಗಿ ನಿರ್ಧರಿಸಲು ಕೋರ್ಟ್ ಈ ಆದೇಶ ಮಾಡಿದೆ.

ಬಿಹಾರದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ' ನಡೆಸಲು ಚುನಾವಣಾ ಆಯೋಗ ಹೊರಡಿಸಿದ್ದ ಅಧಿಸೂಚನೆಯನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ಮಾಲ್ಯ ಬಾಗ್ಚಿ ಅವರಿದ್ದ ಪೀಠವು ಈ ಆದೇಶ ಪ್ರಕಟಿಸಿದೆ. ಆಯೋಗದ ವಿಶೇಷ ಪರಿಷ್ಕರಣಾ ಕ್ರಮದ ಕಾನೂನುಬದ್ಧತೆಯನ್ನು ನ್ಯಾಯಾಲಯವು ಎತ್ತಿಹಿಡಿದಿದೆ.

“ಯಾರ ಹೆಸರುಗಳು ಪೌರತ್ವದ ಸಂದೇಹದ ಮೇಲೆ ಕಡಿತಗೊಂಡಿವೆಯೋ, ಅಂತಹ ಪ್ರಕರಣಗಳನ್ನು ಆಯೋಗವು ನಾಲ್ಕು ವಾರಗಳಲ್ಲಿ 1955ರ ಪೌರತ್ವ ಕಾಯ್ದೆಯಡಿ ರಚಿಸಲಾದ ಸಕ್ಷಮ ಪ್ರಾಧಿಕಾರಕ್ಕೆ ಉಲ್ಲೇಖಿಸಬೇಕು” ಎಂದು ಪೀಠವು ತಿಳಿಸಿದೆ.

ಸಂಬಂಧಪಟ್ಟ ವ್ಯಕ್ತಿಗಳಿಗೆ ಕಡ್ಡಾಯವಾಗಿ ನೋಟಿಸ್ ನೀಡಿ, ಅವರ ವಾದ ಆಲಿಸಲು ಸೂಕ್ತ ಅವಕಾಶ ಕಲ್ಪಿಸಬೇಕು. ಮುಂದಿನ ವಿಧಾನಸಭಾ ಚುನಾವಣೆ ಅಥವಾ ಸ್ಥಳೀಯ ಸಂಸ್ಥೆಗಳ ಚುನಾವಣೆ ಇವೆರಡರಲ್ಲಿ ಯಾವುದು ಮೊದಲು ಬರುತ್ತದೆಯೋ, ಅದಕ್ಕೂ ಮುನ್ನವೇ ಈ ಪೌರತ್ವ ನಿರ್ಧಾರದ ಪ್ರಕ್ರಿಯೆಯನ್ನು ಕಾನೂನುಬದ್ಧವಾಗಿ ಪೂರ್ಣಗೊಳಿಸಬೇಕು ಎಂದು ಸಕ್ಷಮ ಪ್ರಾಧಿಕಾರಕ್ಕೆ ಗಡುವು ವಿಧಿಸಲಾಗಿದೆ. ತನಿಖೆಯ ನಂತರ ಆ ವ್ಯಕ್ತಿಗಳು ಭಾರತೀಯ ನಾಗರಿಕರು ಎಂಬುದು ಸಾಬೀತಾದರೆ, ಅವರ ಹೆಸರುಗಳನ್ನು ತಕ್ಷಣವೇ ಮತದಾರರ ಪಟ್ಟಿಯಲ್ಲಿ ಮರುಸ್ಥಾಪಿಸಬೇಕು ಎಂದೂ ಕೋರ್ಟ್ ಸ್ಪಷ್ಟಪಡಿಸಿದೆ.

ಚುನಾವಣಾ ಆಯೋಗಕ್ಕೆ ಪೌರತ್ವ ಪರಿಶೀಲಿಸುವ ಅಧಿಕಾರವಿದೆಯೇ ಎಂಬ ಕಾನೂನಾತ್ಮಕ ಪ್ರಶ್ನೆಗೆ ಉತ್ತರಿಸಿದ ಸಿಜೆಐ ಸೂರ್ಯ ಕಾಂತ್, “ಮತದಾರರ ಪಟ್ಟಿಗೆ ಹೆಸರು ಸೇರಿಸುವ ಸೀಮಿತ ಉದ್ದೇಶಕ್ಕಾಗಿ ಮಾತ್ರ ವ್ಯಕ್ತಿಯ ಪೌರತ್ವವನ್ನು ಪರಿಶೀಲಿಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ. ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 16ರ ಅನ್ವಯ ಆಯೋಗಕ್ಕೆ ಈ ಸಾಂವಿಧಾನಿಕ ಹಕ್ಕಿದೆ” ಎಂದರು.

ಚುನಾವಣಾ ಆಯೋಗದ ಪೌರತ್ವ ನಿರ್ಧಾರವು ಅಂತಿಮವಲ್ಲ. ಆಯೋಗವು ಒಬ್ಬ ವ್ಯಕ್ತಿಯ ಹೆಸರನ್ನು ಪಟ್ಟಿಯಿಂದ ಕೈಬಿಟ್ಟ ತಕ್ಷಣ ಆತನ ಪೌರತ್ವ ರದ್ದಾಗುವುದಿಲ್ಲ. ಪೌರತ್ವ ಕಾಯ್ದೆಯಡಿ ಕೇಂದ್ರ ಸರ್ಕಾರದ ಸಕ್ಷಮ ಪ್ರಾಧಿಕಾರ ಮಾತ್ರ ಒಬ್ಬರ ಪೌರತ್ವವನ್ನು ಅಂತಿಮವಾಗಿ ನಿರ್ಧರಿಸಲು ಸಾಧ್ಯ. ಆಯೋಗದ ತೀರ್ಮಾನ ಕೇವಲ ಚುನಾವಣಾ ಪ್ರಕ್ರಿಯೆಗೆ ಮಾತ್ರ ಸೀಮಿತವಾಗಿರುತ್ತದೆ.”

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಲು ಇಂತಹ ವಿಶೇಷ ಪರಿಷ್ಕರಣೆಗಳು ಪೂರಕವಾಗಿವೆ ಎಂದು ಅಭಿಪ್ರಾಯಪಟ್ಟ ನ್ಯಾಯಾಲಯ, ಆಯೋಗದ ನೆಗೆಟಿವ್ ವರದಿಗಳು ಒಬ್ಬ ವ್ಯಕ್ತಿಯ ಪೌರತ್ವದ ಹಕ್ಕನ್ನು ಸಂಪೂರ್ಣವಾಗಿ ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಅರ್ಜಿದಾರರಿಗೆ ಆಶ್ವಾಸನೆ ನೀಡಿದೆ.









Editor & Editorial Board, Publisher and Owned by Janaki Vijayakumar # 555, 17th Cross, SBM Colony, Srinivasanagar, Banashankari, Bengaluru-560050. Printed At : M/s Apoorva Printers & Publishers, 179, Suggata Road, H.M. Halli, Bengaluru-562157.